## ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

## ಇದರ

## ಜ್ಞಾಪನಾ ಪತ್ರ(ಸಂಘ ನಿಯಾಮಾವಳಗಳು)

## ಕಂಪನಿಗಳ ಕಾಯಿದೆ 2013 ರಂತೆ ತಿದ್ದುಪಡಿ ಮಾಡಿರುವುದು

**ಪೂರ್ವಭಾವಿ**

1. ಈ ಜ್ಞಾಪನಾ ಪತ್ರದ ವ್ಯಾಖ್ಯಾನಗಳು, ಈ ಕೆಳಕಂಡ ಅಭಿವ್ಯಕ್ತಗಳು ಕೆಳಕಂಡ ಅರ್ಥಗಳನ್ನು ಹೊಂದಿರುತ್ತವೆ, ಆದರೆ, ಅವು ವಿಷಯಕ್ಕೆ ಅಸಂಬದ್ಧವಾಗಿದ್ದರೆ :

ಎ) 'ಕಾಯಿದೆ' ಎಂದರೆ, ಕಂಪನಿಗಳ ಕಾಯಿದೆ, 2013 ಮತ್ತು ಜಂಟಿ ಸ್ಟಾಕ್ ಕಂಪನಿಗಳ ಬಗ್ಗೆ ಮತ್ತು ಅದರಿಂದ ಕಂಪನಿಗೆ ಬಾಧಕವಾಗುವಂತಹವು ಅದರಡಿಯಲ್ಲಿ ಕಾಲ ಕಾಲಕ್ಕೆ ಮಾಡುವ ಮಾರ್ಪಾಡುಗಳು ಅಥವಾ ಇನ್ಯಾವುದೇ ಕಾಯಿದೆ ಅಥವಾ ಕಾಯಿದೆಗಳು.

ಬಿ) 'ಜ್ಞಾಪನಾ ಪತ್ರ' ಎಂದರೆ, ಮೂಲತಃ ರಚಿಸಿದ ಈ ಕಂಪನಿಯ ಜ್ಞಾಪನಾ ಪತ್ರ ಮತ್ತು ಕಾಲ ಕಾಲಕ್ಕೆ ತಿದ್ದುಪಡಿ ಮಾಡಿರುವಂತಹವು.

(ಸಿ) 'ನಿರ್ದೇಶಕರ ಮಂಡಳ' ಅಥವಾ 'ಮಂಡಳ' ಎಂದರೆ ಹಾಲಿ ಕಂಪನಿಯ ನಿರ್ದೇಶಕರ ಮಂಡಳ.

(ಡಿ) 'ವಾಪಸ್ಸು ಕೊಂಡುಕೊಳ್ಳುವುದು' ಕಂಪನಿಯು ತನ್ನದೇ ಆದ ಸೆಕ್ಯೂರಿಟಗಳನ್ನು ಖರೀದಿಸುವುದು.

(ಇ) 'ಮೂಲಧನ' ಎಂದರೆ, ಸಮಯಕ್ಕೆ ಅನುಗುಣವಾಗಿ ಕಂಪನಿಯ ಉದ್ದೇಶಕ್ಕಾಗಿ ಅಧಿಕೃತವಾಗಿ ಪಡೆದ ಷೇರು ಬಂಡವಾಳ.

(ಎಫ್) 'ಅಧ್ಯಕ್ಷರು' ಎಂದರೆ ಕಂಪನಿಯ ಹಾಲಿ ನಿರ್ದೇಶಕರ ಮಂಡಳಯ ಅಧ್ಯಕ್ಷರು.

(ಜಿ) 'ಕಂಪನಿ' ಎಂದರೆ, ಕರ್ನಾಟಕ ಸ್ಟೇಟ್ ಸ್ಮಾಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್.

(ಹೆಚ್) 'ಅಭೌತೀಕರಣ' ಎಂದರೆ ಭೌತಿಕ ಷೇರುಗಳನ್ನು ವಿದ್ಯುನ್ಮಾನ ಪದ್ಧತಿಗೆ ಮಾರ್ಪಾಡು ಮಾಡುವುದು.

(ಐ) 'ರಾಜ್ಯಪಾಲರು', ಅಂದರೆ ಕರ್ನಾಟಕ ರಾಜ್ಯದ ರಾಜ್ಯಪಾಲರು.

(ಜೆ) 'ಸರ್ಕಾರ' ಎಂದರೆ, ಕರ್ನಾಟಕ ಸರ್ಕಾರ.

(ಕೆ) 'ಸದಸ್ಯರು' ಎಂದರೆ ಕಂಪನಿಯ ಷೇರುದಾರರು.

(ಎಲ್) 'ತಿಂಗಳು' ಎಂದರೆ, ಕ್ಯಾಲೆಂಡರ್ ತಿಂಗಳು.

(ಎಂ) 'ಅನಧಿಕೃತ ನಿರ್ದೇಶಕರು' ಎಂದರೆ ಯಾರು ಕರ್ನಾಟಕ ಸರ್ಕಾರದಿಂದ ನೇಮಕಗೊಂಡಿರುವುದಿಲ್ಲವೋ ಅವರು ಕರ್ನಾಟಕ ಸರ್ಕಾರದ ಅಧಿಕಾರಿಗಳು / ಅಧಿಕಾರಿಗಳು ಆಗಿರುವುದಿಲ್ಲ.

(ಎನ್) 'ಕಛೇರಿ' ಎಂದರೆ ಹಾಲಿ ಕಂಪನಿಯ ನೋಂದಣಿ ಕಛೇರಿ.

(ಒ) 'ಅಧಿಕೃತ ನಿರ್ದೇಶಕರು' ಎಂದರೆ, ಯಾರು ಕರ್ನಾಟಕ ಸರ್ಕಾರದಿಂದ ನೇಮಕಗೊಳ್ಳುತ್ತಾರೋ ಅಂತಹವರು ಕರ್ನಾಟಕ ಸರ್ಕಾರದ ಅಧಿಕಾರಿಗಳು/ಅಧಿಕಾರಿಗಳ ಆಗಿರುತ್ತಾರೆ.

2. ಕಾಯಿದೆಯ ಒಂದನೇ ಷೆಡ್ಯೂಲ್‌ನ ಟೇಬಲ್ 'ಎಫ್' ನಲ್ಲಿ ಕಂಡ ನಿಯಮಾವಳಿಗಳು ಕಂಪನಿಗೆ ಅನ್ವಯವಾಗುವುದಿಲ್ಲ, ಆದರೆ ಅವು ಮರುಕಳಿಸಿದ್ದರೆ; ಅವುಗಳನ್ನು ಹೊಂದಿದ್ದರೆ ಅಥವಾ ಈ ಜ್ಞಾಪನಾ ಪತ್ರದಲ್ಲಿ ಅಥವಾ ಕಾಯಿದೆಯ ಪ್ರಕಾರ ಅವುಗಳನ್ನು ಅಳವಡಿಸಿಕೊಳ್ಳಲು ನಿರ್ಬಂಧವಿದ್ದರೆ ಮಾತ್ರ ಅನ್ವಯವಾಗುತ್ತವೆ.

3. ಕಂಪನಿಯು ಸಾರ್ವಜನಿಕ ಕಂಪನಿಯಾಗಿರುತ್ತದೆ.

**ಷೇರುಗಳು**

4. ಕಂಪನಿಯ ಷೇರು ಬಂಡವಾಳ ರೂ.30,00,00,000 (ಮೂವತ್ತು ಕೋಟಿ ರೂಪಾಯಿಗಳು) ಇದನ್ನು ರೂ.100 ಗಳಿಗೆ ಒಂದರಂತೆ 30,00,000 ಗಳ ಈಕ್ವಿಟಿ ಷೇರುಗಳಾಗಿ ವಿಂಗಡಿಸಲಾಗಿರುವುದರೊಂದಿಗೆ ಷೇರುಗಳನ್ನು ಹೆಚ್ಚಿಸುವ ಅಥವಾ ಕಡಿಮೆ ಮಾಡುವ ಅಧಿಕಾರವನ್ನು ಹೊಂದಿರುತ್ತದೆ.

5. ಕಾಯಿದೆ ಮತ್ತು ಕಂಪನಿಯ ನಿಯಮಾವಳಿಗಳಲ್ಲಿ ಕಂಡ ನಿಬಂಧನೆಗಳ ಪ್ರಕಾರ ಹಾಲಿ ಕಂಪನಿಯಲ್ಲಿ ಷೇರುಗಳನ್ನು ಹೊಂದಿರುವ ಹಾಗೂ ಈ ಹಿಂದೆ ಹೊಂದಿರುವ ಯವುದೇ ವಿಶೇಷ ಹಕ್ಕುಗಳಿಗೂ ಚ್ಯುತಿ ಬಾರದಂತೆ, ಕಂಪನಿಯು ಆದ್ಯತೆ, ಮುಂದೂಡಲಾದ ಅಥವಾ ಇನ್ನ್ಯಾವುದೇ ವಿಶೇಷ ಹಕ್ಕುಗಳನ್ನು ಹೊಂದಿರುವ ಅಥವಾ ಅಂತಹ ನಿರ್ಬಂಧಗಳನ್ನು ಧಕ್ಕೆ ಬಾರದಂತೆ ಆದ್ಯತೆ, ಮುಂದೂಡಲಾದ ಅಥವಾ ಇನ್ನ್ಯಾವುದೇ ವಿಧವಾದ ವಿಶೇಷ ಹಕ್ಕುಗಳು ಅಥವಾ ನಿರ್ಬಂಧಗಳು ಡಿವಿಡೆಂಡ್, ಷೇರು ಬಂಡವಾಳದ ಮತದಾನದ ಹಕ್ಕು ವಾಪಸ್ಸು ಪಡೆಯುವುದು ಅಥವಾ ಕಂಪನಿಯು ಕಾಲ ಕಾಲಕ್ಕೆ ತೆಗೆದುಕೊಳ್ಳುವ ವಿಶೇಷ ನಿರ್ಣಯಗಳು ಮತ್ತು ವಿಶೇಷ ನಿರ್ಣಯಗಳಂತೆ ಆದ್ಯತೆಯ ಷೇರುಗಳನ್ನು ಮಂಜೂರು ಮಾಡುವುದು ಮತ್ತು ನೀಡುವುದು, ಇತ್ಯಾದಿಗಳನ್ನು ಕಂಪನಿಯು ಪುನಃ ಪಡೆಯಬಹುದಾಗಿದೆ.

6. ಷೇರು ಬಂಡವಾಳವನ್ನು ಯಾವುದೇ ಸಮಯದಲ್ಲಾಗಲೀ ಕಂಪನಿಯು ವಿವಿಧ ವರ್ಗಗಳ ಷೇರುಗಳಾಗಿ ವಿಭಜಿಸಿದಾಗ ಯಾವುದೇ ವರ್ಗಕ್ಕೆ ಲಗತ್ತಾದ ಹಕ್ಕುಗಳು (ಆ ವರ್ಗದ ಷೇರುಗಳನ್ನು ನೀಡುವಾಗ ಆ ವರ್ಗದ ನಿಯಮ ನಿಬಂಧನೆಗಳಗನುಸಾರವಾಗಿ) ಮತ್ತು ಕಾಯಿದೆಯ ನಿಂಬಂಧನಗಳಗನುಸಾರವಾಗಿ ಕಂಪನಿಯ ಮುಚ್ಚಬೇಕಾದರೆ ಒಟ್ಟು ಷೇರುದಾರರ ಪೈಕಿ ಜಾರಿ ಮಾಡಿರುವ ಆ ವರ್ಗಕ್ಕೆ ಸಂಬಂಧಪಟ್ಟಂತೆ ನಾಲ್ಕನೇ ಮೂರರಷ್ಟು ಷೇರುದಾರರ ಒಪ್ಪಿಗೆಯನ್ನು ಲಿಖಿತ ಮೂಲಕ ಪಡೆದು ಅಥವಾ ವಿಶೇಷ ಠರಾವನ್ನು ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸಿ ಅನುಮತಿಯನ್ನು ಪಡೆಯತಕ್ಕದ್ದು. ಅಂತಹ ಪ್ರತಿಯೊಂದು ಸಾಮಾನ್ಯ ಸಭೆಯನ್ನು ನಿಬಂಧನೆ ಮತ್ತು ನಿಯಮಗಳಗನುಸಾರವಾಗಿ ಪ್ರತಿಯೊಂದಕ್ಕೂ ಪ್ರತ್ಯೇಕವಾಗಿ ರೂಪಾಂತರಗಳನ್ನು ಸರ್ವ ಸದಸ್ಯರ ಸಭೆಯಲ್ಲಿ ಪಡೆಯತಕ್ಕದ್ದು. ಆದರೆ, ಪ್ರತಿಯೊಂದು ಸಭೆಗೂ ಕನಿಷ್ಟ ಇಬ್ಬರು ಷೇರುದಾರರು ಅಥವಾ ಅವರ ಬದಲಿಗೆ ಬದಲೀ ಪ್ರತಿನಿಧಿ [ಪ್ರಾಕ್ಸಿ]ಯ ಕೋರಂ ಅಗತ್ಯ ಮತ್ತು ಆ ವರ್ಗದ ಷೇರುದಾರರ ಒಂದನೇ ಮೂರರಷ್ಟು ಹಾಜರಾತಿಯು ಕಡ್ಡಾಯ.

7. ಈ ಜ್ಞಾಪನಾ ಪತ್ರದ ಮತ್ತು ಕಾಯಿದೆಯ ನಿಬಂಧನೆಗಳ ಪ್ರಕಾರ ಮತ್ತು ಸರ್ಕಾರದ ನಿರ್ದೇಶನದಂತೆ ಕಂಪನಿಯ ಬಂಡವಾಳವಾದ ಷೇರುಗಳು ಮತ್ತು ಭದ್ರತೆಗಳು ಮಂಡಳಿಯ ನಿಯಂತ್ರಣದಲ್ಲಿರತಕ್ಕದ್ದು, ಸದರಿ ಮಂಡಳಿಯು ಅವುಗಳನ್ನು ಬೇರೆಯವರಿಗೆ ಇತರೇ ಷರತ್ತುಗಳ ಪ್ರಕಾರ ಹಂಚಿಕೆ ಮಾಡುವ ಅಥವಾ ಅವುಗಳನ್ನು ಅವರ ಆ ಸಮಯದಲ್ಲಿ ಮಂಡಳಿಯ ವಿವೇಚನೆಯಂತೆ ವಿಲೇವಾರಿ ಮಾಡುವ ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತದೆ. ಸದರಿ ಷೇರುಗಳನ್ನು ಪಾರ್ ಬೆಲೆಗೆ ಅಥವಾ ಪ್ರೀಮಿಯಂ ಅಥವಾ ರಿಯಾಯ್ತಿ ದರದಲ್ಲಿ (ಕಾಯಿದೆಯ ನಿಯಮ ನಿಬಂಧನೆಗಳ ಪ್ರಕಾರ) ಮತ್ತು ಮಂಡಳಿಯ ತೀರ್ಮಾನದಂತೆ ಆ ಬೆಲೆಗೆ ಅಥವಾ ಸದರಿ ಪ್ರತಿ ಫಲಕ್ಕೆ ನೀಡುವ ಅಧಿಕಾರವನ್ನು ಮಂಡಳಿಯು ಹೊಂದಿರುತ್ತದೆ.

8. ಕಾಯಿದೆಯ ನಿಬಂಧನೆಗಳ ಪ್ರಕಾರ

ಸದಸ್ಯರ ಪುಸ್ತಕದಲ್ಲಿ ನಮೂದಿಸಿದ ಪ್ರತಿಯೊಬ್ಬ ವ್ಯಕ್ತಿಯ ಹೆಸರನ್ನು ಸದಸ್ಯರೆಂದು ನಮೂದಿಸಲಾಗುತ್ತದೋ ಅಂತಹ ಸದಸ್ಯನು ಯಾವುದೇ ಹಣವನ್ನು ಕಂಪನಿಗೆ ಪಾವತಿ ಮಾಡದೆಯೇ ಕಂಪನಿಯ ಸಾಮಾನ್ಯ ಮೊಹರಿನೊಂದಿಗಿರುವ ಪ್ರಮಾಣ ಪತ್ರವನ್ನು ಪಡೆಯಲು ಅರ್ಹನಾಗಿರುತ್ತಾನೆ, ಅದರಲ್ಲಿ ಆತನ ಹೆಸರು, ಆತನು ಹೊಂದಿರುವ ಷೇರು/ಗಳ ಸಂಖ್ಯೆ ಮತ್ತು ಆತನು ಪಾವತಿ ಮಾಡಿದ ಹಣದ ವಿವರ ಎಲ್ಲವನ್ನೂ ನಮೂದಿಸಿರತಕ್ಕದ್ದು. ಆದರೆ, ಸದರಿ ಷೇರು/ಗಳು ಒಬ್ಬರಿಗಿಂತ ಹೆಚ್ಚು ಸದಸ್ಯರು ಜಂಟಿಯಲ್ಲಿ ಹೊಂದಿದ್ದರೆ, ಆಗ ಕಂಪನಿಯು ಒಂದಕ್ಕಿಂತ ಹೆಚ್ಚು ಪ್ರಮಾಣ ಪತ್ರಗಳನ್ನು ನೀಡುವ ಅಗತ್ಯವಿಲ್ಲ ಮತ್ತು ಜಂಟಿ ಸದಸ್ಯರ ಪೈಕಿ ಒಬ್ಬರ ಹೆಸರಿನಲ್ಲಿ ನೀಡುವುದು ಎಲ್ಲರಿಗೂ ನೀಡಿದಂತಾಗುವುದು.

9. ಷೇರು ಪ್ರಮಾಣ ಪತ್ರವು ವಿರೂಪಗೊಂಡರೆ ಅಥವಾ ಕಳೆದು ಹೋದರೆ ಅಥವಾ ನಾಶವಾದರೆ, ಅದನ್ನು ಅದಕ್ಕೆ ಶುಲ್ಕವೇನಾದರೂ ಇದ್ದಲ್ಲಿ ಅದನ್ನು ಪಾವತಿಮಾಡಿ ನವೀಕರಿಸಿ ಪಡೆಯಬಹುದು, ಅದರ ಶುಲ್ಕ ಐವತ್ತು ರೂಪಾಯಿಗಳಗಿಂತ ಮೀರಿರಬಾರದು. ಮತ್ತು ಅದರ ಕುರುವಾಗಿ ಯಾವುದೇ ನಷ್ಟ ಭರ್ತಿ ಪತ್ರ ಮತ್ತು ಕಂಪನಿಗೆ ಇದರ ಸಲುವಾಗಿ ಪುರಾವೆಗಳನ್ನು ಪರಿಶೀಲಿಸಲು ಉಂಟಾಗುವ ಖರ್ಚುಗಳನ್ನು ಪಾವತಿ ಮಾಡತಕ್ಕದ್ದು ಮತ್ತು ನಿರ್ದೇಶಕರ ಯೋಚನೆಗೆ ಮತ್ತು ಕಂಪನಿಯ ನಿಯಮ ನಿಬಂಧನೆಗಳ ಅನುಸಾರವಾಗಿ (ಷೇರು ಬಂಡವಾಳ ಮತ್ತು ಡಿಬೆಂಚರ್) ನಿಯಮಾವಳಿಗಳು, 2014 ರ ಅಡಿಯಲ್ಲಿ ಪಾವತಿ ಮಾಡತಕ್ಕದ್ದು.

10. ಕಾಯಿದೆಯಡಿಯಲ್ಲಿ ನಿರ್ದಿಷ್ಟಪಡಿಸಿದ ಮಟ್ಟಿಗೆ ಹೊರತು ಪಡಿಸಿ ಕಂಪನಿಯ ನಿಧಿಯ ಭಾಗಾಂಶವನ್ನು ಸಹಾ ಕಂಪನಿಯ ಷೇರುಗಳನ್ನು ಕೊಳ್ಳಲು ಅಥವಾ ಭದ್ರತೆಗಳ ಮೇಲಿನ ಸಾಲವಾಗಿ ಕಂಪನಿಯ ಷೇರುಗಳನ್ನು ಉಪಯೋಗಿಸುವಂತಿಲ್ಲ.

## ಅಡಮಾನದ ಹಕ್ಕು

11. ಎಲ್ಲಾ ಹಣಕ್ಕಾಗಿ ಕಂಪನಿಯು ಪ್ರತಿಯೊಂದು ಷೇರಿನ ಮೇಲೂ ಅಡಮಾನದ ಹಕ್ಕನ್ನು ಹೊಂದಿರುತ್ತದೆ (ಪೂರ್ತಿ ಪಾವತಿಯಾದ ಷೇರುಗಳನ್ನು ಹೊರತುಪಡಿಸಿ) (ಹಾಲಿ ಪಾವತಿಸಬೇಕಾದಂತಹ ಅಥವಾ ಇಲ್ಲವಾದಲ್ಲಿ) ಷೇರಿನ ಮೊಬಲಗನ್ನು ಒಂದು ನಿರ್ದಿಷ್ಟ ಸಮಯದಲ್ಲಿ ಕರೆಯಬಹುದು ಅಥವಾ ಪಾವತಿ ಮಾಡಬಹುದು, ಮತ್ತು ಒಬ್ಬ ವ್ಯಕ್ತಿಯ ಹೆಸರಿನಲ್ಲಿರುವ ನೋಂದಣಿಯಾಗಿರುವ (ಪೂರ್ತಿ ಪಾವತಿಯಾದ ಷೇರುಗಳನ್ನು ಹೊರತುಪಡಿಸಿ) ಎಲ್ಲಾ ಮೊಬಲಗಿಗಾಗಿ ಆತನು ಕಂಪನಿಗೆ ಹಾಲಿ ಪಾವತಿಸಬೇಕಾದ ಅಥವಾ ಆತನ ಸ್ವತ್ತಿನಿಂದ ಪಾವತಿಸಬೇಕಾದ ಮೊಬಲಗು, ಆದರೆ, ಮಂಡಳಿಯ ಎಲ್ಲಾ ಷೇರುಗಳು ಅಥವಾ ಅದರ ಭಾಗಾಂಶವನ್ನು "ಈ ಕಲಂನ ನಿಬಂಧನೆಗಳಿಂದ" ವಿನಾಯಿತಿಗೊಳಿಸಬಹುದು. ಕಂಪನಿಯ ಅಡಮಾನದ ಹಕ್ಕೇನಾದರೂ ಇದ್ದರೂ ಸಹಾ ಸದರಿ ಷೇರಿಗೆ ಪಾವತಿಸಬೇಕಾದ ಎಲ್ಲಾ ಲಾಭಾಂಶ [ಡಿವಿಡೆಂಡ್] ಗಳನ್ನು ಪಾವತಿಸತಕ್ಕದ್ದು.

12. ಕಂಪನಿಯು ಅಡಮಾನದ ಹಕ್ಕನ್ನು ಹೊಂದಿರುವ ಷೇರುಗಳನ್ನು ಮಂಡಳಿಯ ವಿವೇಚನೆಯಂತೆ ಕಂಪನಿಯು ಮಾರಾಟ ಮಾಡಬಹುದು, ಆದರೆ, ಹಾಲಿ ಅಡಮಾನವಿರುವ ಷೇರುಗಳ ಹಣವನ್ನು ಸ್ವಲ್ಪವಾದರೂ ಪಾವತಿಸಬೇಕು, ಅಥವಾ ಅವಧಿ ಮುಗಿದ ಹದಿನಾಲ್ಕು ದಿನಗಳ ನಂತರ ಸದರಿ ಅಡಮಾನಕ್ಕಾಗಿ ಪಾವತಿಸಬೇಕಾದ ಹಣವನ್ನು ಪಾವತಿ ಮಾಡಲು ಬೇಡಿಕೆಯನ್ನಿಟ್ಟು ಲಿಖಿತ ಸೂಚನಾ ಪತ್ರವನ್ನು ನೀಡತಕ್ಕದ್ದು, ಇದನ್ನು ಹಾಲಿ ನೋಂದಾಯಿತ ಷೇರುದಾರರಿಗೆ ನೀಡತಕ್ಕದ್ದು ಅಥವಾ ಮರಣ ಹೊಂದಿದ ಅಥವಾ ದಿವಾಳಿಯಾದ ವ್ಯಕ್ತಿಗಳ ಪರವಾಗಿ ನೀಡತಕ್ಕದ್ದು.

13. ಆ ವಿಧವಾಗಿ ಮಾರಾಟ ಮಾಡಿದ ಮೊಬಲಗನ್ನು ಹಾಲಿ ಪಾವತಿಸಬೇಕಾದ ಅಡಮಾನದ ಭಾಗಾಂಶಕ್ಕೆ ಪಾವತಿಸತಕ್ಕದ್ದು ಉಳಿದ ಶೇಷವನ್ನು ಮಾರಾಟದ ದಿನದಂದು ಇದ್ದ ಅರ್ಹ ಷೇರುದಾರರಿಗೆ ಪಾವತಿಸತಕ್ಕದ್ದು. (ಆದರೆ ಮಾರಾಟ ಮಾಡುವುದಕ್ಕೆ ಮುನ್ನ ಇದ್ದ ಅಡಮಾನದ ಷೇರುಗಳಿಗೆ ಪಾವತಿ ಮಾಡತಕ್ಕದ್ದು). ಖರೀದಿದಾರರನ್ನು ಷೇರುದಾರರೆಂದು ನೋಂದಣಿ ಮಾಡತಕ್ಕದ್ದು ಮತ್ತು ಆತನು ಖರೀದಿಯ ಹಣದ ಬಗ್ಗೆ ಅರ್ಜಿಯನ್ನು ನೋಡುವಂತಿಲ್ಲ ಅಥವಾ ಸದರಿ ಷೇರುಗಳ ಮೇಲೆ ಆತನಿಗಿರುವ ಹಕ್ಕನ್ನು ಯಾವುದೇ ವಿಧವಾದ ಅನಿಯಮಿತತೆ ಅಥವಾ ಅಸಮರ್ಥತೆಯ ಮಾರಾಟದ ಪ್ರಕ್ರಿಯೆಯಿಂದ ಯಾವುದೇ ಬಾಧಕವಿರುವುದಿಲ್ಲ.

13(ಎ). ಅಡಮಾನದ ಹಕ್ಕಿನ ಬಗೆಗಿನ ಈ ಜ್ಞಾಪನಾ ಪತ್ರದ ನಿಬಂಧನೆಗಳನ್ನು ರೂಪಾಂತರವಾಗಿ ಕಂಪನಿಯ ಇತರೆ ಭದ್ರತೆಗಳು ಮತ್ತು ಡಿಬೆಂಚರ್‌ಗಳಿಗೂ ಅನ್ವಯಿಸಗೊಳಿಸಬಹುದು.

## ಷೇರುಗಳ ಮೇಲಿನ ಕರೆಗಳು

14. ಸದಸ್ಯರು ತಾವು ಹೊಂದಿರುವ ಷೇರುಗಳಿಗೆ ಪಾವತಿಸಬೇಕಾದ ಎಲ್ಲಾ ಹಣವನ್ನು ಪಾವತಿಸುವಂತೆ ಕಂಪನಿಯ ಮಂಡಳಿಯ ಕೇಳಬಹುದು ಮತ್ತು ಇದು ಹಂಚಿಕೆ ಷರತ್ತುಗಳ ಪ್ರಕಾರ ನಿಗಧಿತ ಅವಧಿಯಲ್ಲಿ ಪಾವತಿ ಮಾಡುವಂತೆ ತಿಳಿಸದಂತಲ್ಲ. ಮತ್ತು ಪ್ರತಿಯೊಬ್ಬ ಸದಸ್ಯನು ಪಾವತಿ ಮಾಡಲು ಮಾಡಿದ ಪ್ರತಿಯೊಂದು ಕರೆಗೂ ಪಾವತಿಸಬೇಕಾದ ಹಣವನ್ನು ಮಂಡಳಿ ನಿಗಧಿ ಪಡಿಸಿದ ಸಮಯ ಮತ್ತು ಸ್ಥಳದಲ್ಲಿ ಪಾವತಿ ಮಾಡತಕ್ಕದ್ದು. ಇದನ್ನು ವಂತಿಕೆಯಲ್ಲಿ ಸಹಾ ಪಾವತಿಸಬಹುದು. ಮತ್ತು ಷೇರು ಬಂಡವಾಳಕ್ಕಾಗಿ ಯಾವುದೇ ಕರೆಯನ್ನು ನೀಡಿದಾಗ, ಸದರಿ ವರ್ಗದಡಿ ಬರುವ ಷೇರುಗಳಿಗೆ ಒಂದೇ ವಿಧವಾದ ಪದ್ಧತಿಯನ್ನು ಸದರಿ ಷೇರುಗಳ ವರ್ಗದ ಅಡಿಯಲ್ಲಿ ಅಳವಡಿಸತಕ್ಕದ್ದು.

15. ಷೇರಿನ ಮಾಲೀಕತ್ವವನ್ನು ಷೇರುದಾರರು ಜಂಟಿಯಾಗಿ ಹೊಂದಿದ್ದರೆ ಆಗ ಸದರಿ ಷೇರುಗಳ ಬಗ್ಗೆ ಕರೆ ನೀಡಿದಾಗ ಎಲ್ಲಾ ಜಂಟಿ ಷೇರುದಾರರು ಪಾವತಿಮಾಡಲು ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿಯೂ ಜವಾಬ್ದಾರರಾಗಿರುತ್ತಾರೆ.

16. ಕರೆ ಮಾಡಿದ ಷೇರಿನ ಹಣವನ್ನು ನಿಗಧಿತ ದಿನಾಂಕದಂದು ಅಥವಾ ಅದಕ್ಕಿಂತ ಮುಂಚಿತವಾಗಿ ಪಾವತಿಸತಕ್ಕದ್ದು. ಹಾಗೆ ಪಾವತಿಸದೇ ಇರುವ ವ್ಯಕ್ತಿಗಳಿಂದ ಅವರು ಪಾವತಿ ಮಾಡಬೇಕಾದ ಹಣಕ್ಕೆ ವಾರ್ಷಿಕ ಶೇಕಡಾ ಐದ ರಂತೆ ಅಥವಾ ಅದಕ್ಕಿಂತ ಕಡಿಮೆಯ ದರದಲ್ಲಿ ಬಡ್ಡಿಯನ್ನು ವಿಧಿಸಲಾಗುವುದು, ಇದನ್ನು ಮಂಡಳಿ ನಿಗಧಿ ಪಡಿಸಿದಂತೆ ಸದರಿ ದಿನಾಂಕದಿಂದ ವಸೂಲು ಮಾಡಬಹುದು ಅಥವಾ ಮಂಡಳಿಯ ತೀರ್ಮಾನದಂತೆ ಸದರಿ ಬಡ್ಡಿಯನ್ನು ಸಂಪೂರ್ಣವಾಗಿ ಅಥವಾ ಅದರ ಭಾಗಾಂಶವನ್ನು ಮನ್ನಾ ಮಾಡಬಹುದು.

17. ಷೇರು ಮೊಬಲಗನ್ನು ಷೇರುಗಳನ್ನು ನೀಡುವಾಗ ಅಥವಾ ಹಂಚಿಕೆ ಮಾಡಿದಾಗ ಅಥವಾ ಪಾವತಿ ಮಾಡಲು ಇನ್ಯಾವುದೇ ದಿನಾಂಕವನ್ನು ನಿಗಧಿ ಪಡಿಸಿದಾದ, ಅದರ ಮುಖಬೆಲೆ ಮೇಲೆ ಅಥವಾ ಪ್ರೀಮಿಯಂ ಪ್ರಕಾರ ಈ ನಿಯಮಾವಳಿಗಳ ಪ್ರಕಾರ ಕರೆ ನೀಡಿದಾಗ ನಿಗಧಿತ ದಿನಾಂಕದಂದು ಷೇರುಗಳು ನೀಡುವ ಷರತ್ತಿನ ಪ್ರಕಾರ ಪಾವತಿ ಮಾಡತಕ್ಕದ್ದು. ಸದರಿ ಹಣವನ್ನು ಪಾವತಿ ಮಾಡದೇ ಹೋದ ಪಕ್ಷದಲ್ಲಿ ಬಡ್ಡಿ ಮತ್ತು ಖರ್ಚುಗಳ ಪಾವತಿಯ ಬಗ್ಗೆ ಈ ನಿಯಮಾವಳಿಗಳಲ್ಲಿ ತಿಳಿಸಿದಂತೆ ಕರೆ ಮಾಡಿ ಸೂಚನಾ ಪತ್ರ ನೀಡ ಪ್ರಕಾರ ಸದರಿ ಕರೆ ಮಾಡಿದ ಷೇರುಗಳ ಮುಟ್ಟುಗೋಲು ಹಾಕಿಕೊಳ್ಳುವುದು ಅಥವಾ ಇನ್ಯಾವುದೇ ಕ್ರಮವನ್ನು ಅನುಸರಿಸಿ ವಸೂಲಿ ಮಾಡಿಕೊಳ್ಳತಕ್ಕದ್ದು.

18. ಕಾಯಿದೆ ನಿಬಂಧನೆಗಳಿಗೆ ಅನುಸಾರವಾಗಿಲ್ಲದಿರುವಾಗ ಷೇರುಗಳನ್ನು ನೀಡಲು ಮಂಡಳಿಯು ಯಾವುದೇ ವ್ಯವಸ್ಥೆಗಳನ್ನು ಮಾಡಿಕೊಳ್ಳುವುದಿಲ್ಲ.

19. ಮಂಡಳಿಯು –

(ಎ) ಯಾವುದೇ ಸದಸ್ಯರು ತಾನು ಹೊಂದಿರುವ ಮುಂಗಡವಾಗಿ ಪಾವತಿಸಲು ಇಚ್ಛಿಸಿದರೆ ತನ್ನ ವಿವೇಚನೆಯಂತೆ ಕರೆಯದೇ ಇರುವ ಮತ್ತು ಪಾವತಿ ಮಾಡದೇ ಇರುವ ಎಲ್ಲಾ ಹಣವನ್ನು ಅಥವಾ ಅದರ ಭಾಗಾಂಶವನ್ನು ಸ್ವೀಕರಿಸತಕ್ಕದ್ದು ; ಮತ್ತು

(ಬಿ) ಆವಿಧವಾಗಿ ಮುಂಗಡವಾಗಿ ಪಾವತಿಸಿದ ಎಲ್ಲಾ ಅಥವಾ ಯವುದೇ ಹಣಕ್ಕೆ (ಪಾವತಿ ಮಾಡುವವರೆಗೂ ಸದರಿ ಮುಂಗಡ ಹಣವು ಹಾಲಿ ಪಾವತಿಸಬೇಕಾಗುತ್ತದೆ) ಬಡ್ಡಿಯನ್ನು ವಾರ್ಷಿಕ ಶೇಕಡಾ ಹನ್ನೆರಡಕ್ಕೆ ಮೀರದಂತೆ ಮಂಡಳಿಯು ಮತ್ತು ಮುಂಗಡವಾಗಿ ಪಾವತಿಸುವ ಸದಸ್ಯರ ನಡುವೆ ಆದ ಒಪ್ಪಂದದ ಪ್ರಕಾರ ಪಾವತಿಸತಕ್ಕದ್ದು.

**<u>ಷೇರುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು</u>**

20. ಕರೆಮಾಡಿದ ದಿನಾಂಕದಂದು ಕಂತುಗಳನ್ನು ಪಾವತಿ ಮಾಡಲು ಸದಸ್ಯರು ವಿಫಲರಾದಲ್ಲಿ, ಆಗ ಮಂಡಳಿಯು ತದನಂತರದ ಅವಧಿಯಲ್ಲಿ ಪಾವತಿ ಮಾಡಲು ಕರೆ ನೀಡಿದ ಹಣ ಅಥವಾ ಅದರ ಭಾಗಾಂಶವನ್ನು ಪಾವತಿ ಮಾಡದೇ ಉಳಿಸಿಕೊಂಡಿರುವುದನ್ನು ಪಾವತಿಸಲು ಆತನಿಗೆ ಸೂಚನಾ ಪತ್ರವನ್ನು ನೀಡಿ ಸದರಿ ಕರೆ ಮಾಡಿದ ಅಥವಾ ಬಾಕಿ ಕಂತಿನ ಮೊಬಲಗನ್ನು ಮತ್ತು ಆ ದಿನದವರೆಗೂ ಒಟ್ಟುಗೂಡಿದ ಬಡ್ಡಿ ಸಹಿತ ಪಾವತಿ ಮಾಡಲು ತಿಳಿಸತಕ್ಕದ್ದು.

21. ಮೇಲ್ಕಂಡ ಸೂಚನಾ ಪತ್ರವು –

(ಎ) ಮುಂದಿನ ದಿನವನ್ನು ತಿಳಿಸುವುದು (ಸೂಚನಾ ಪತ್ರ ನೀಡಿದ ದಿನಾಂಕದಿಂದ ನಿಗದಿತ ಹದಿನಾಲ್ಕು ದಿನಗಳ ಅವಧಿಗಿಂತ ಮುಂಚಿತವಾಗಿ) ನಿಗಧಿ ಪಡಿಸಿದ ದಿನಾಂಕಕ್ಕೆ ಅಥವಾ ಅದಕ್ಕಿಂತ ಮುಂಚೆ ಪಾವತಿಯನ್ನು ಮಾಡಬೇಕಾಗಿದ್ದು, ಮತ್ತು

(ಬಿ) ತಿಳಿಸಿದ ಮುಂದಿನ ದಿನಾಂಕಕ್ಕಿಂತ ಮುಂಚಿತವಾಗಿ ಪಾವತಿ ಮಾಡದೇ ಹೋದಲ್ಲಿ ಯಾವ ಷೇರುಗಳಿಗಾಗಿ ಕರೆ ಮಾಡಲಾಗಿದೆಯೋ ಅಂತಹ ಷೇರುಗಳನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು.

22. ಮೇಲ್ಕಂಡಂತೆ ಸೂಚನಾ ಪತ್ರದಲ್ಲಿ ಕಂಡ ಅಂಶಗಳನ್ನು ಅನುಸರಿಸದೇ ಹೋದಲ್ಲಿ, ಅಂತಹ ಷೇರುಗಳ ವಿಷಯದಲ್ಲಿ ಪಾವತಿ ಮಾಡದೇ ಹೋದ ಪಕ್ಷದಲ್ಲಿ ಸದರಿ ಸೂಚನಾ ಪತ್ರದಲ್ಲಿ ಕಂಡ ಷೇರುಗಳ ಬಗ್ಗೆ ಮಂಡಳಿಯು ಠರಾವು ಮೂಲಕ ಮುಟ್ಟುಗೋಲು ಹಾಕಿಕೊಳ್ಳಬಹುದು.

23. ಮಂಡಳಿಯ ವಿವೇಚನೆಯಂತೆ ಮುಟ್ಟುಗೋಲು ಹಾಕಿಕೊಂಡ ಷೇರುಗಳನ್ನು ಮಾರಾಟ ಮಾಡ ಬಹುದು ಅಥವಾ ಇನ್ಯಾವುದೇ ರೀತಿಯಲ್ಲಿ ವಿಲೇವಾರಿ ಮಾಡಬಹುದು ಮತ್ತು ಸದರಿ ಷೇರುಗಳನ್ನು ಮಾರಾಟ ಅಥವಾ ಇನ್ಯಾವುದೇ ವಿಧದಲ್ಲಿ ವಿಲೇವಾರಿ ಮಾಡುವ ಮುನ್ನ ಮಂಡಳಿಯು ತನ್ನ ವಿವೇಚನೆಯಂತೆ ಮುಟ್ಟುಗೋಲನ್ನು ರದ್ದುಪಡಿಸಬಹುದಾಗಿದೆ.

24. ಯಾವ ವ್ಯಕ್ತಿಯ ಷೇರುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆಯೋ ಅಂತಹ ವ್ಯಕ್ತಿಯ ಸದಸ್ಯತ್ವವು ಸದರಿ ಷೇರುಗಳ ಬಗ್ಗೆ ರದ್ದಾದಂತೆ. ಆದರೆ, ಆತನ ಷೇರುಗಳ ಮುಟ್ಟುಗೋಲು ಹಾಕಿಕೊಂಡ ನಂತರ, ಅಂದರೆ ಮುಟ್ಟುಗೋಲು ಹಾಕಿಕೊಂಡ ದಿನದಂದು ಸದರಿ ವ್ಯಕ್ತಿಯು ಕಂಪನಿಗೆ ಪಾವತಿಸಬೇಕಾದ ಷೇರುಗಳ ಬಾಬ್ತು ಬಾಕಿ ಹಣವನ್ನು ಹಾಲಿ ಪಾವತಿಸ ಬೇಕಾಗಿರುತ್ತದೆ. ಆದರೆ, ಆತನು ಸದರಿ ಷೇರುಗಳ ಬಗ್ಗೆ ಪಾವತಿಸಬೇಕಾದ ಹಣವನ್ನು ಪಾವತಿ ಮಾಡುವವರೆಗೂ ಹಾಗೆ ಇದ್ದು ಆತನು ಕಂಪನಿಗೆ ಸಂಪೂರ್ಣವಾಗಿ ಪಾವತಿಸಿದ ನಂತರ ಸದರಿ ಕಂಪನಿಯು ಸದರಿ ಷೇರುಗಳ ಬಗ್ಗೆ ಆತನ ಸಾಲವನ್ನು ರದ್ದುಪಡಿಸುತ್ತದೆ.

25 (1). ಘೋಷಿಸುವ ಪ್ರಮಾಣಕರ್ತರ ಘೋಷಣೆಯನ್ನು ಪರಿಶೀಲಿಸಿದಾಗ ಲಿಖಿತ ಮೂಲಕ ನೀಡಿದವರು ಕಂಪನಿಯ ನಿರ್ದೇಶಕರು, ವ್ಯವಸ್ಥಾಪಕರು ಅಥವಾ ಕಾರ್ಯದರ್ಶಿ ಆಗಿದ್ದು, ಘೋಷಣೆಯಲ್ಲಿ ತಿಳಿಸಿದ ದಿನಾಂಕದಂದು ಷೇರನ್ನು ಮುಟ್ಟುಗೋಲು ಹಾಕಿಕೊಂಡಾಗ ಅದುವೇ ಕೊನೆಯ ಪುರಾವೆಯಾಗಿರುತ್ತದೆ.ಅಥವಾ ಎಲ್ಲಾ ಕ್ಲೇಮುದಾರರ ಪರವಾಗಿ ಕಂಪನಿಯಿಂದ ಷೇರು ಮತ್ತು ಘೋಷಣೆ ಮತ್ತು ಕಂಪನಿಯು ಪರಿಗಣನೆಗೆ ತೆಗೆದುಕೊಂಡ, ಯಾವುದಾದರೂ ಇದ್ದಲ್ಲಿ, ಅದನ್ನು ಮಾರಾಟ ಅಥವಾ ಇನ್ಯಾವುದೇ ವಿಧವಾಗಿ ವಿಲೇವಾರಿ ಮಾಡಿದ್ದೇ ಆದಲ್ಲಿ ಅವರನ್ನು ಷೇರು ದಾರರು ಎಂಬುದಾಗಿ ನೋಂದಣಿ ಮಾಡಲಾಗುವುದು ಮತ್ತು ಅದನ್ನು ಮಾರಾಟ ಅಥವಾ ಇನ್ಯಾವುದೇ ವಿಧವಾಗಿ ವಿಲೇವಾರಿ ಮಾಡಿದಾಗ ಅವರನ್ನು ಷೇರುದಾರರು ಎಂದು ನಮೂದಿಸಲಾಗುವುದು.

(2). ಕಂಪನಿಯು ಯಾವುದೇ ಮೊಬಲಗನ್ನು ಯಾವುದೇ ಷೇರನ್ನು ಮಾರಾಟ ಅಥವಾ ಇನ್ಯಾವುದೇ ರೀತಿಯಲ್ಲಿ ವಿಲೇವಾರಿ ಮಾಡಿ ಸ್ವೀಕರಿಸಿದಾಗ ಕಂಪನಿಯು ಷೇರನ್ನು ಯಾರ ಪರವಾಗಿ ಮಾರಾಟ ಅಥವಾ ಇನ್ಯಾವುದೇ ರೀತಿಯಲ್ಲಿ ಪರಿಹಾರ ಮಾಡಿದಾಗ ಸದರಿ ವ್ಯಕ್ತಿಯ ಹೆಸರಿನಲ್ಲಿ ವರ್ಗಾವಣೆಯನ್ನು ಮಾಡತಕ್ಕದ್ದು.

(3). ಆಗ ವರ್ಗಾವಣೆಯನ್ನು ಪಡೆದುಕೊಂಡ ವ್ಯಕ್ತಿಯು ಷೇರುದಾರರಾಗಿ ನೋಂದಣಿಗೊಳ್ಳುತ್ತಾರೆ. ಮತ್ತು

(4). ಸದರಿ ವರ್ಗಾವಣೆಯನ್ನು ಪಡೆದಂತಹ ವ್ಯಕ್ತಿಯು ಖರೀದಿಯ ಹಣದ ಅರ್ಜಿಯನ್ನು ನೋಡುವಂತಿಲ್ಲ ಅಥವಾ ಆತನಿಗೆ ಸದರಿ ಷೇರುಗಳ ಮೇಲೆ ಇರುವ ಹಕ್ಕು ಮುಟ್ಟುಗೋಲು ಹಾಕಿಕೊಂಡಾಗ, ಮಾರಾಟ ಅಥವಾ ಇತರೇ ವಿಧದಲ್ಲಿ ವಿಲೇಮಾರಿ ಮಾಡಿದಾಗ ಯಾವುದೇ ವಿಧವಾಗಿ ಅನಿಯಮಿತತೆ ಅಥವಾ ಅಸಮರ್ಥತೆಗಳಿಂದ ಬಾಧಕವಾಗಿರುವುದಿಲ್ಲ.

26. ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಇರುವ ನಿಯಮ ನಿಬಂಧನೆಗಳನ್ನು ಯಾವುದಾದರೂ ಹಣವನ್ನು ಪಾವತಿ ಮಾಡದೇ ಇದ್ದಾಗ ಅನ್ವಯಿಸತಕ್ಕದ್ದು, ಅಂದರೆ, ಷೇರುಗಳನ್ನು ನೀಡುವ ನಿಬಂಧನೆಗಳಂತೆ ಹಣವನ್ನು ನಿಗದಿತ ಸಮಯಕ್ಕೆ ಪಾವತಿಸತಕ್ಕದ್ದು ಅದು ಷೇರಿನ ನಾಮ ಮಾತ್ರದ ಹಣವಾಗಿರಬಹುದು ಅಥವಾ ಅದು ಪ್ರೀಮಿಯಂ ಮೂಲಕವಾಗಿ ಆದರೂಆಗಿರಬಹುದು, ಇದನ್ನು ಕರೆ ಮಾಡಿ ಸೂಚಿಸಿದ ತಕ್ಷಣ ಪಾವತಿಸತಕ್ಕದ್ದು.

**<u>ಷೇರುಗಳ ವರ್ಗಾವಣೆ ಮತ್ತು ಪ್ರಸರಣ</u>**

27. ಇದು ಸರ್ಕಾರಿ ಕಂಪನಿಯಾಗಿರುವುದರಿಂದ, ಷೇರುಗಳು ಸರ್ಕಾರದಿಂದ ನಾಮನಿರ್ದೇಶಿತರವರ ಹೆಸರಿನಲ್ಲಿಯೇ ಇರುತ್ತವೆ, ಷೇರುಗಳ ವರ್ಗಾವಣೆ ವರ್ಗಾವಣೆ ಮಾಡುವವರಿಂದ ವರ್ಗಾವಣೆ ಪಡೆಯುವವರ ಹೆಸರಿಗೆ ವರ್ಗಾವಣೆ ಮಾಡುವುದು ಸರ್ಕಾರವು ಕಾಲ ಕಾಲಕ್ಕೆ ಹೊರಡಿಸುವ ಸರ್ಕಾರಿ ಅಧಿಸೂಚನಗಳ ಮೇಲೆ ಆಧಾರವಾಗಿರುತ್ತದೆ.

28. ಮಂಡಳಯು ಷೇರುಗಳ ವರ್ಗಾವಣೆಯನ್ನು ಸರ್ಕಾರವು ಕಾಲ ಕಾಲಕ್ಕೆ ಹೊರಡಿಸುವ ಅಧಿಸೂಚನೆಗಳ ಪ್ರಕಾರ ವರ್ಗಾವಣೆ ಮಾಡಲಾಗುವುದು.

29. ಸದಸ್ಯರು ಷೇರುಗಳನ್ನು ವರ್ಗಾವಣೆ ಮಾಡುವ ಹಕ್ಕನ್ನು ಈ ಕೆಳಕಂಡಂತೆ ನಿರ್ಬಂಧಿಸಲಾಗಿದೆ:

(ಎ) ಷೇರನ್ನು ಸದಸ್ಯನು ಅಥವಾ ವರ್ಗಾವಣೆ ಮಾಡಲು ಅರ್ಹತೆಯಿರುವ ವ್ಯಕ್ತಿಯು ವರ್ಗಾವಣೆ ಮಾಡುವವರು ಸರ್ಕಾರದಿಂದ ಅನುಮೋದಿತ ವ್ಯಕ್ತಿ/ವ್ಯಕ್ತಿಗಳಗೆ ಅಥವಾ ಸರ್ಕಾರದ ಪರವಾಗಿ ಮಾತ್ರ ಮಾಡತಕ್ಕದ್ದು.

(ಬಿ) ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಉದ್ದೇಶಿತ ಷೇರುಗಳ ವರ್ಗಾವಣೆಯನ್ನು ನೋಂದಣಿ ಮಾಡಲು ಮಂಡಳಯು ನಿರಾಕರಿಸಬಹುದು.

30. ಕಾಲ ಕಾಲಕ್ಕೆ ಹೊರಡಿಸುವ ಸರ್ಕಾರಿ ಅಧಿಸೂಚನೆಯಂತೆ ವರ್ಗಾವಣೆಗೊಂಡ ಷೇರುಗಳ ನೋಂದಣಿಯನ್ನು ಮಂಡಳಯು ನಿರಾಕರಿಸುವಂತಿಲ್ಲ ಮತ್ತು ಸರ್ಕಾರದ ನಿರ್ದೇಶನವನ್ನು ತಪ್ಪದೇ ಪಾಲಿಸತಕ್ಕದ್ದು.

31. ಸರ್ಕಾರದ ನಾಮನಿರ್ದೇಶಿತರಾಗಿ ಯಾವುದೇ ಷೇರನ್ನು ಯಾವುದೇ ವ್ಯಕ್ತಿಯು ಹೊಂದಿದ್ದರೆ, ಸರ್ಕಾರವು ಸದರಿ ಷೇರನ್ನು ಸರ್ಕಾರಕ್ಕಾಗಲೀ ಸರ್ಕಾರದಿಂದ ನಾಮನಿರ್ದೇಶಿತರಾದ ಇತರೇ ವ್ಯಕ್ತಿ ಅಥವಾ ವ್ಯಕ್ತಿಗಳ ಹೆಸರಿಗೆ ವರ್ಗಾವಣೆ ಮಾಡಲು ಆತನಿಗೆ ತಿಳಿಸಿದಾಗ, ಅಥವಾ ಯಾವುದೇ ವ್ಯಕ್ತಿಗಳು ಹುಚ್ಚರಾದರೇ ಅಥವಾ ನ್ಯಾಯಾಲಯದಿಂದ ದಿವಾಳಿಯೆಂದು ತೀರ್ಮಾನಿಸಿದರೆ ಅಥವಾ ಮರಣಹೊಂದಿದರೆ ಮತ್ತು ಅಥವಾ ಸದರಿ ವ್ಯಕ್ತಿಯು ಕಂಪನಿಯಾಗಿದ್ದು ಅದು ಸ್ವಯಂಪ್ರೇರಿತವಾಗಿ ಅಥವಾ ನ್ಯಾಯಾಲಯದ ಆದೇಶದ ಮೂಲಕ ಅಥವಾ ನ್ಯಾಯಾಲಯದ ಮೇಲ್ವಿಚಾರಣೆಯಿಂದ ಮುಚ್ಚಿದರೆ, ಈ ಕೆಳಕಂಡ ನಿಬಂಧನೆಗಳು ಪರಿಣಾಮಕಾರಿಯಾಗುವವು. ಅಂದರೆ –

(ಎ) ಯಾವುದೇ ಷೇರನ್ನು ವರ್ಗಾಯಿಸುವಂತೆ ಸರ್ಕಾರವು ಯಾವುದೇ ಸಮಯದಲ್ಲಿ ಕಂಪನಿಗೆ ನಿರ್ದೇಶನ ನಿಡಿದಾಗ.

(ಬಿ) ಕಂಪನಿಯು ತಕ್ಷಣವೇ ಷೇರುಗಳನ್ನು ಷೇರುದಾರರಿಗೆ ನೀಡತಕ್ಕದ್ದು ಅಥವಾ ಷೇರುದಾರರು ಬುದ್ಧಿ ಮಾಂದ್ಯನಾದರೆ ಆತನ ಸಮಿತಿ ಅಥವಾ ಇತರೇ ಪೋಷಕರಿಗೆ ಅಥವಾ ಷೇರುದಾರರು ಕಾನೂನಿನ ಪ್ರಕಾರ ದಿವಾಳಿಯಾದರೆ ಆಗ ಆತನ ಆಸ್ತಿಗಳನ್ನು ನೋಡಿಕೊಳ್ಳುವ ನಿಯೋಜಕರಿಗೆ ಅಥವಾ ಷೇರುದಾರರು ಮರಣ ಹೊಂದಿದರೆ ಆತನ ವಾರಸುದಾರರಿಗೆ ಅಥವಾ ಕಾನೂನು ಪ್ರತಿನಿಧಿಗಳಗೆ, ಅಥವಾ ಷೇರುದಾರರು ಕಂಪನಿಯಾಗಿದ್ದರೆ, ಅದನ್ನು ಮುಚ್ಚಿದರೆ ಮೇಲ್ಕಂಡಂತೆ ಅದರ ಬರಖಾಸ್ತುದಾರರಿಗೆ, ಸೂಚನಾ ಪತ್ರವನ್ನು ಲಿಖಿತ ಮೂಲಕ ಸೂಕ್ತ ವರ್ಗಾವಣೆ ಪತ್ರವನ್ನು ನೀಡುವಂತೆ ಬೇಡಿಕೆ ಪತ್ರವನ್ನು ಷೇರುದಾರರು ಅಥವಾ ಸಂದರ್ಭಾನುಸಾರವಾಗಿ ಸಮಿತಿ ಅಥವಾ ಪೋಷಕರು, ಅಥವಾ ನಿಯೋಜಕರು ಅಥವಾ ವಾರಸುದಾರರು ಅಥವಾ ಕಾನೂನು ಪ್ರತಿನಿಧಿಗಳು ಅಥವಾ ಇತರೇ ಷೇರುದಾರರು 14 ದಿನಗಳ ನಂತರ ಸರ್ಕಾರಕ್ಕಾಗಲಿ ಅಥವಾ ಸರ್ಕಾರದಿಂದ ನಾಮನಿರ್ದೇಶನಗೊಂಡ ಯಾವುದೇ ವ್ಯಕ್ತಿಗಾಗಲೀ ಅಥವಾ ವ್ಯಕ್ತಿಗಳಗಾಗಲೀ ಷೇರು ವರ್ಗಾವಣೆ ಪತ್ರವನ್ನು ಷೇರುಗಳ ಮತ್ತು ಸಂಬಂಧಪಟ್ಟ ಪ್ರಮಾಣ ಪತ್ರಗಲ ಸಹಿತವಾಗಿ ಸರ್ಕಾರಕ್ಕಾಗಲೀ ಅಥವಾ ಸರ್ಕಾರದಿಂದ ನಾಮನಿರ್ದೇಶನಗೊಂಡ ವ್ಯಕ್ತಿ ಅಥವಾ ವ್ಯಕ್ತಿಗಳಗಾಗಲೀ, ಸರ್ಕಾರಕ್ಕಾಗಲೀ ಅಥವಾ ಇದೇ ವಿಚಾರವಾಗಿ ಸರ್ಕಾರದಿಂದ ನಾಮನಿರ್ದೇಶನಗೊಂಡ ವ್ಯಕ್ತಿ ಅಥವಾ ವ್ಯಕ್ತಿಗಳಗೆ ತದನಂತರ ಸಲ್ಲಿಸತಕ್ಕದ್ದು. ವರ್ಗಾವಣೆಗಾಗಿ ಸದರಿ ಷೇರುದಾರರ ಪರವಾಗಿ ವರ್ಗಾವಣೆ ಪತ್ರವನ್ನು ಸದರಿ ಷೇರುಗಳ ಬಗ್ಗೆ ಮತ್ತು ಅವು ಸೂಕ್ತವಾಗಿರತಕ್ಕದ್ದು ಮತ್ತು ಸದರಿ ಷೇರುದಾರರ ಪರವಾಗಿ ಬರೆದುಕೊಡತಕ್ಕದ್ದು ಸದರಿ ಷೇರುದಾರರು ಅಥವಾ ಆತನ ವಾರಸುದಾರರು, ಮತ್ತು ತದನಂತರ ಷೇರುದಾರರು ಅಥವಾ ಆತನ ವಾರಸುದಾರರು ಅವರಿಗೆ ಸದರಿ ಷೇರುಗಳ ಬಗ್ಗೆ ಅವರಿಗಿರುವ ಹಕ್ಕನ್ನು, ಇತ್ಯಾದಿಗಳನ್ನು ತಡೆಹಿಡಿಯಲಾಗುವುದು ಮತ್ತು ಸದರಿ ಷೇರು ಪ್ರಮಾಣ ಪತ್ರವು, ಮೇಲ್ಕಂಡಂತೆ ಹಸ್ತಾಂತರಿಸದಿದ್ದರೆ ತದನಂತರ ಅದನ್ನು ರದ್ದು ಮಾಡಲಾಗುವುದು ಮತ್ತು ಅದು ನಿರರ್ಥಕ ಮತ್ತು ಅದರಿಂದ ಏನು ಪ್ರಯೋಜನವಿರುವುದಿಲ್ಲ ಮತ್ತು ತದನಂತರ ಕಂಪನಿಯು ಅದಕ್ಕೆ ಬದಲಾಗಿ ಹೊಸ ಪ್ರಮಾಣ ಪತ್ರವನ್ನು ಸರ್ಕಾರದ ಪರವಾಗಿ ಅಥವಾ ಸರ್ಕಾರದಿಂದ ಅದಕ್ಕಾಗಿ ನೇಮಕಗೊಂಡ ವ್ಯಕ್ತಿ ಅಥವಾ ವ್ಯಕ್ತಿಗಳಗೆ ವರ್ಗಾವಣೆ ಮಾಡಲಾಗುವುದು.

32. ನಿರ್ದೇಶಕರು ಮರಣ ಹೊಂದಿದರೆ, ಕಂಪನಿಯು ಸದರಿ ನಿರ್ದೇಶಕರು ಮರಣ ಹೊಂದಿರುವುದರ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡತಕ್ಕದ್ದು ಮತ್ತು ಸರ್ಕಾರದ ಅಧಿಸೂಚನೆ ಪ್ರಕಾರ ಷೇರುಗಳ ವರ್ಗಾವಣೆಯನ್ನು ಮಾಡತಕ್ಕದ್ದು, ಅದರಂತೆ ಷೇರುಗಳ ವರ್ಗಾವಣೆಯನ್ನು ಮಾಡತಕ್ಕದ್ದು.

33. ಷೇರುದಾರರು ಮರಣ ಹೊಂದಿದರೆ ಅಥವಾ ದಿವಾಳಿಯಾಗಿ ಸದರಿ ಷೇರುಗಳಿಗೆ ಅರ್ಹರಾದವರಿಗೆ ಲಾಭಾಂಶ ಮತ್ತು ಇತರೇ ಅನುಕೂಲಗಳನ್ನು ಪಡೆಯಲು ಅರ್ಹರಾಗಿದ್ದು ಕಾಲ ಕಾಲಕ್ಕೆ ನಿರ್ದೇಶಕರು ಕೇಳುವ ಪುರಾವೆಗಳನ್ನು ಸಲ್ಲಿಸತಕ್ಕದ್ದು, ಮತ್ತು ಅವರು ಸದಸ್ಯರೆಂದು ನೋಂದಣಿ ಮಾಡಲು ಹಕ್ಕುಳ್ಳವರಾಗಿರುತ್ತಾರೆ. ಷೇರುಗಳಿಗೆ ನೋಂದಾಯಿತ ಷೇರುದಾರರಾಗಿದ್ದು ಅವರು ಸದರಿ ಷೇರುಗಳಿಗೆ ನೋಂದಾಯಿತ ಷೇರುದಾರರಾಗಿದ್ದು ಅವರು ಷೇರುದಾರರಿಗಿರುವ ಹಕ್ಕುಗಳನ್ನು ಕಂಪನಿಯಲ್ಲಿ ಚಲಾಯಿಸಲು ಸಂಪೂರ್ಣ ಹಕ್ಕುಳ್ಳವರಾಗಿರುತ್ತಾರೆ.

## <u>ಬಂಡವಾಳದ ಬದಲಾವಣೆ</u>

34. ಸರ್ಕಾರದ ಅನುಮೋದನೆಗೆ ಒಳಪಟ್ಟು ಕಾಲ ಕಾಲಕ್ಕೆ ಕಂಪನಿಯು ಸಾಮಾನ್ಯ ಠರಾವಿನಂತೆ ಷೇರು ಬಂಡವಾಳವನ್ನು ಹೆಚ್ಚಿಸ ಬಹುದು, ಅದನ್ನು ಠರಾವಿನಲ್ಲಿ ತಿಳಿಸಿರುವಂತೆ ಷೇರು ಹಣವಾಗಿ ವಿಭಜಿಸತಕ್ಕದ್ದು.

35. ಕಂಪನಿಯು ಮೂಲ ಧನವನ್ನು ಹೆಚ್ಚಿಸುವ ವಿಚಾರದಲ್ಲಿ ಕಾಯಿದೆಯ ಕಲಂ 62 ಮತ್ತು ಕಲಂ 42 ಮತ್ತು / ಅಥವಾ ನಿಬಂಧನೆಗಳನ್ನು ಅನುಸರಿಸತಕ್ಕದ್ದು.

36. ಹೊಸ ಷೇರುಗಳು ಸಹಾ ಕರೆಗಳ ಪಾವತಿ, ಅಡಮಾನ, ವರ್ಗಾವಣೆ, ಪ್ರಸರಣ, ಮುಟ್ಟುಗೋಲು ಮತ್ತು ಇತರೆ ವಿಷಯಗಳೆಲ್ಲವೂ ಮೂಲ ಷೇರು ಬಂಡವಾಳದ ನಿಬಂಧನೆಗಳಿಗೆ ಒಳಪಟ್ಟಿರುತ್ತವೆ.

37. ಕಾಯಿದೆಯ ಕಲಂ 61ರಡಿಯಲ್ಲಿನ ನಿಬಂಧನಗಳಂತೆ ಮತ್ತು ಸರ್ಕಾರದ ಅನುಮೋದನೆ ಮೇರೆಗೆ, ಕಂಪನಿಯು ಸಾಧಾರಣ ಠರಾವಿನಂತೆ –

(ಎ) ಷೇರು ಮೂಲ ಬಂಡವಾಳವನ್ನು ಏಕೀಕರಿಸುವುದು ಮತ್ತು ಅತಿ ದೊಡ್ಡ ಮೊಬಲಗನ್ನು ಹಾಲಿ ಇರುವ ಷೇರುಗಳಿಗಿಂತಲು ಹೆಚ್ಚು ಇರುವ ಹಾಗೆ ವಿಭಜಿಸುವುದು;

(ಬಿ) ಹಾಲಿ ಇರುವ ಯಾವುದೇ ಷೇರುಗಳನ್ನು ಮರುವಿಂಗಡಣೆ ಮಾಡುವುದು, ಷೇರು ಮೊತ್ತವನ್ನು ಒಟ್ಟಾಗಿ ಅಥವಾ ಅದರ ಭಾಗಾಂಶವನ್ನು ಸಣ್ಣ ಮೊತ್ತದ ಷೇರುಗಳಾಗಿ ವಿಂಗಡಿಸುವುದು, ಅಂದರೆ ಕಂಪನಿಯ ನಿಯಮಾವಳಿಗಳಲ್ಲಿ ನಿರ್ಧರಿಸಿರುವುದನ್ನು, ಅಂದರೆ, ಕಾಯಿದೆಯ ನಿಯಮಾವಳಿಗನುಸಾರವಾಗಿ ವಿಂಗಡಿಸತಕ್ಕದ್ದು.

(ಸಿ) ಠರಾವಿನ ದಿನದಂದು ಷೇರುಗಳನ್ನು ರದ್ದು ಪಡಿಸಿದರೆ, ಅದನ್ನು ಪರಿಗಣಿಸುವಂತಿಲ್ಲ ಹಾಗೂ ಅದನ್ನು ಯಾವ ವ್ಯಕ್ತಿಯು ಅಂಗೀಕರಿಸುವಂತಿಲ್ಲ.

38. ಸರ್ಕಾರದ ಅನುಮೋದನೆಯ ನಿಬಂಧನೆಗೆ ಒಳಪಟ್ಟು ಕಂಪನಿಯು ವಿಶೇಷ ಠರಾವಿನ ಮೂಲಕ ಯಾವುದೇ ವಿಧವಾಗಿ ಕಡಿಮೆಗೊಳಸಬಹುದು ಮತ್ತು ಯಾವುದೇ ಅಧಿಕೃತ ಕ್ರಮದಿಂದ ಮತ್ತು ಕಾನೂನಿನ ಅಡಿಯಲ್ಲಿ ಒಪ್ಪಿಗೆಯ ಅವಶ್ಯಕತೆ ಇರುತ್ತದೆ: –

(ಎ) ಅದರ ಷೇರು ಬಂಡವಾಳ;
(ಏ) ಯಾವುದೇ ಮೂಲಧನದ ವಿಮೋಚನಾ ಮೀಸಲು ನಿಧಿಯ ಖಾತೆ; ಅಥವಾ
(ಐ) ಯಾವುದೇ ಷೇರಿನ ಪ್ರೀಮಿಯಂ ಅಕೌಂಟ್

## <u>ಷೇರುಗಳ ಅಭೌತೀಕರಣ</u>

38(ಎ). ಇಲ್ಲಿಯವರೆಗೂ ಏನೇ ಹೇಳಿದ್ದರೂ ಸಹಾ, ಅದನ್ನು ಹೊರತುಪಡಿಸಿ, ಕಂಪನಿಯು ತನ್ನ ಷೇರುಗಳನ್ನು, ಡಿಬೆಂಚರ್‌ಗಳನ್ನು ಮತ್ತು ಇತರೇ ಭದ್ರತಾ ಪತ್ರಗಳನ್ನು ಡಿಪಾಜಿಟರಿ ಕಾಯಿದೆ, 1996ರ ಅನುಸಾರವಾಗಿ ಅಭೌತೀಕರಣ ಮಾಡಲು ಹಕ್ಕುಳ್ಳದ್ದಾಗಿರುತ್ತದೆ ಮತ್ತು ತನ್ನ ಷೇರುಗಳನ್ನು, ಡಿಬೆಂಚರ್‌ಗಳನ್ನು ಮತ್ತು ಇತರೇ ಭದ್ರತಾ ಪತ್ರಗಳನ್ನು ಅಭೌತೀಕರಣ ವಿಧಾನದಲ್ಲಿ ವಂತಿಗೆ ಮಾಡಬಹುದಾಗಿದೆ. ಮತ್ತು ಷೇರುಗಳ ವರ್ಗಾವಣೆ ಬಗ್ಗೆ ಅಥವಾ ಇತರೆ ಮಾರಾಟಮಾಡಬಹುದಾದಂತಹ ಭದ್ರತೆಗಳನ್ನು ವಿದ್ಯುನ್ಮಾನ ಮತ್ತು ಶಿಲೀಂಧ್ರ ವಿಧಾನದಲ್ಲಿ ಹೊಂದಿರಬಹುದು ಮತ್ತು ಇದಕ್ಕೆ ಡಿಪಾಜಿಟರಿಗಳ ಕಾಯಿದೆ, 1996 ಅನ್ವಯಿಸತಕ್ಕದ್ದು.

**<u>ತನ್ನ ಷೇರುಗಳನ್ನು ತಾನೇ ಮರು ಖರೀದಿಸುವಿಕೆ</u>**

38(ಬಿ). ಇಲ್ಲಿಯವರೆಗೂ ಈ ಜ್ಞಾಪನಾ ಪತ್ರದಲ್ಲಿ ಏನೇ ಹೇಳಿದ್ದರೂ ಸಹಾ, ಅದನ್ನು ಹೊರತುಪಡಿಸಿ, ಕಲಂ 68 ರಿಂದ 70 ರ ವರೆಗಿನ ನಿಬಂಧನೆಗಳನ್ವಯ ಮತ್ತು ಸದರಿ ಕಾಯಿದೆಯ ಅನ್ವಯವಾಗಬಲ್ಲ ಇತರೇ ನಿಬಂಧನೆಗಳ ಪ್ರಕಾರ ಅಥವಾ ಹಾಲಿ ಚಾಲ್ತಿಯಲ್ಲಿರುವ ಇತರೆ ಕಾನೂನಿನ ಪ್ರಕಾರ,. ಕಂಪನಿಯು ತನ್ನ ಷೇರುಗಳನ್ನಾಗಲೀ ಅಥವಾ ಇತರೇ ನಿರ್ದಿಷ್ಟವಾದ ಭದ್ರತೆಗಳನ್ನು ಖರೀದಿಸಬಹುದು.

**<u>ಎರವಲು ಪಡೆಯುವ ಅಧಿಕಾರಗಳು</u>**

39. ಕಾಲ ಕಾಲಕ್ಕೆ ತಮಗೆ ಕಾಯಿದೆಯ ಕಲಂ 73 ರಿಂದ 76, 179 ಮತ್ತು 180 ಹಾಗೂ ಈ ಜ್ಞಾಪನಾ ಪತ್ರದ ನಿಬಂಧನೆಗಳನ್ವಯ ಅಥವಾ ಕಾಲಕಾಲಕ್ಕೆ ಅನ್ವಯವಾಗಬಲ್ಲ ಕಾನೂನಿನ ಪ್ರಕಾರ ಸಾಲಗಳನ್ನು ಪಡೆಯಬಹುದು ಅಥವಾ ಯಾವುದೇ ಹಣ ಅಥವಾ ಹಣಗಳಿಗೆ ಭದ್ರತೆಯನ್ನು ನೀಡಿ ಕಂಪನಿಗಾಗಿ ಸಾಲಗಳನ್ನು ಪಡೆಯಬಹುದು.

40. ಮಂಡಳಿಯು ಹಣವನ್ನು ಸಾಲವಾಗಿ ಪಡೆಯಬಹುದು ಅಥವಾ ಪಾವತಿಗಳಿಗೆ ಅಥವಾ ಮರುಪಾವತಿಗಳಿಗೆ ಮತ್ತು ವಿಧಿಸಬಹುದಾದ ಷರತ್ತುಗಳನ್ವಯ ಜಾಮೀನು ನೀಡಬಹುದು, ಇವೆಲ್ಲವನ್ನು ಮಂಡಳಿಯು ತನ್ನ ವಿವೇನೆಯಂತೆ ನಿರ್ವಹಿಸುವುದು ಮತ್ತು ವಿಶೇಷವಾಗಿ ಕಂಪನಿಯ ಡಿಬೆಂಚರ್‌ಗಳು ಅಥವಾ ಡಿಬೆಂಚರ್ ಸ್ಟಾಕ್‌ಗಳನ್ನು ನೀಡಿ, ಅಂದರೆ ಕಂಪನಿಯ ಸಂಪೂರ್ಣ ಸ್ವತ್ತು ಅಥವಾ ಅದರ ಭಾಗಾಂಶದ ಮೇಲೆ, ಹಾಲಿ ಇರುವ ಮತ್ತು ಮುಂಬರುವ ಸ್ವತ್ತುಗಳು ಮತ್ತು ಪ್ರಸ್ತುತ ಕರೆಯದೇ ಇರುವ ಮೂಲ ಬಂಡವಾಳವನ್ನು ಒಳಗೊಂಡಂತೆ ಪಡೆಯಲು ಅರ್ಹವಾಗಿರುತ್ತದೆ.

41. ಡಿಬೆಂಬರ್‌ಗಳು, ಡಿಬೆಂಚರ್ ಸ್ಟಾಕ್ ಮತ್ತು ಇತರೇ ಸೆಕ್ಯೂರಿಟಿಗಳನ್ನು ನಿಯೋಜಿಸುವುದರಿಂದ [ಅಸೈನಬಲ್] ಯಾವುದೇ ಷೇರುಗಳು ಕಂಪನಿ ಮತ್ತು ಜಾರಿ ಮಾಡಿದ ವ್ಯಕ್ತಿಗಳಿಂದ ಹೊರತಾಗಿರುತ್ತದೆ.

42. ಯಾವುದೇ ಡಿಬೆಂಚರ್‌ಗಳು, ಡಿಬೆಂಚರ್ ಸ್ಟಾಕ್ ಬಾಂಡ್‌ಗಳು ಅಥವಾ ಇತರೇ ಸೆಕ್ಯೂರಿಟಗಳನ್ನು ಮಂಡಳಿಯು ತೆಗೆದುಕೊಳ್ಳುವ ಮತ್ತು ಇತರೇ ಷರತ್ತುಗಳನ್ವಯ ನೀಡತಕ್ಕದ್ದು. ಆದರೆ, ಡಿಬೆಂಚರ್‌ಗಳನ್ನು ಹಂಚಿಕೆ ಮಾಡುವ ಹಕ್ಕು ಅಥವಾ ಅವುಗಳನ್ನು ಷೇರುಗಳನ್ನಾಗಿ ಪರಿವರ್ತಿಸುವ ಅಧಿಕಾರವನ್ನು ಕಾಯಿದೆಯ ಕಲಂ 62ರ ನಿಬಂಧನೆಗಳನ್ವಯ ನೀಡತಕ್ಕದ್ದು. ಡಿಬೆಂಚರ್‌ಗಳು, ಡಿಬೆಂಚರ್ ಸ್ಟಾಕ್, ಬಾಂಡ್‌ಗಳು ಅಥವಾ ಇತರೇ ಸೆಕ್ಯೂರಿಟಿಗಳನ್ನು ಷೇರುಗಳನ್ನಾಗಿ ಪರಿವರ್ತಿಸುವ ಅಧಿಕಾರವನ್ನು ಅಥವಾ ಷೇರುಗಳನ್ನು ಹಂಚಿಕೆ ಮಾಡುವುದು ಇತ್ಯಾದಿಗಳು ಯಾವುದು ಅನ್ವಯವಾಗುತ್ತದೋ ಅದು ಅನ್ವಯವಾಗುವುದು.

**<u>ಸರ್ವ ಸದಸ್ಯರ ಸಭೆ</u>**

43. ವಾರ್ಷಿಕ ಸರ್ವ ಸದಸ್ಯರ ಸಭೆ ಮತ್ತು ಮುಂದೂಡಿದ ಸಭೆಗಳೆಲ್ಲವನ್ನೂ ಕಾಯಿದೆಯ ಕಲಂ 96 ರ ನಿಬಂಧನೆಗಳ ಪ್ರಕಾರ ನಡೆಸತಕ್ಕದ್ದು.

44. ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಹೊರತುಪಡಿಸಿ ಎಲ್ಲಾ ಸಾಮಾನ್ಯ ಸಭೆಗಳನ್ನು ವಿಶೇಷ ಸಾಮಾನ್ಯ ಸಭೆಗಳೆಂದು ಕರೆಯಲಾಗುವುದು.

44(ಎ). ಸರ್ವ ಸದಸ್ಯರ ಸಭೆಗಳನ್ನು ನಡೆಸುವ ಸಮಯ ದಿನಾಂಕ, ಸ್ಥಳ ಮತ್ತು ಚರ್ಚಿಸುವ ವಿಷಯ, ಇತ್ಯಾದಿಗಳನ್ನೊಳಗೊಂಡ ಉಚಿತ ಸೂಚನಾ ಪತ್ರವನ್ನು ಕನಿಷ್ಟ ಇಪ್ಪತ್ತೊಂದು ದಿನಗಳ ಮುಂಚಿತವಾಗಿ ಬರವಣಿಗೆಯಲ್ಲಿ ಅಥವಾ ವಿದ್ಯುನ್ಮಾನ ಯಂತ್ರಗಳ ಮೂಲಕ ಪ್ರತಿಯೊಬ್ಬ ಸದಸ್ಯರಿಗೂ ಅಥವಾ ಮರಣಹೊಂದಿದ ಸದಸ್ಯರ ವಾರಸುದಾರರಿಗೆ ಅಥವಾ ದಿವಾಳಿಯಾದವರ ನಿಯೋಜಕರಿಗೆ, ಪ್ರತಿಯೊಬ್ಬ ಲೆಕ್ಕಪರಿಶೋಧಕ(ರು) ಮತ್ತು ಕಂಪನಿಯ ನಿರ್ದೇಶಕರಿಗೆ ಕಳುಹಿಸತಕ್ಕದ್ದು.

44(ಬಿ). ಸರ್ವ ಸದಸ್ಯರ ಸಭೆಯನ್ನು ಅತ್ಯಲ್ಪ ಅವಧಿಯ ಸೂಚನಾ ಪತ್ರವನ್ನು ನೀಡಿ ಕರೆಯಬಹುದು, ಆದರೆ ಇದಕ್ಕೆ ಶೇಕಡಾ ೯೫ ರಷ್ಟು ಮತನೀಡುವ ಅಧಿಕಾರವುಳ್ಳ ಸದಸ್ಯರು ತಮ್ಮ ಒಪ್ಪಿಗೆಯನ್ನು ಬರವಣಿಗೆಯಲ್ಲಿ ಅಥವಾ ವಿದ್ಯುನ್ಮಾನ ಪದ್ಧತಿಯಾಗಲೀ ತಿಳಿಸತಕ್ಕದ್ದು.

45. ಮಂಡಳಿಯು ಯಾವುದು ಸರಿಯೆಂದು ತಿಳಿಯುವುದೋ ಆಗ ಮತ್ತು ಸರ್ಕಾರಕ್ಕೆ ಯಾವಾಗ ವಿಶೇಷ ಸರ್ವ ಸದಸ್ಯರ ಸಭೆಯನ್ನು ಕರೆಯಬೇಕೆಂದು ಅಗತ್ಯವಾದಾಗ ವಿಶೇಷ ಸರ್ವ ಸದಸ್ಯರ ಸಭೆಯನ್ನು ಕರೆಯಬಹುದು ಮತ್ತು ಸದಸ್ಯರು ಸದರಿ ಸಭೆಯನ್ನು ಕರೆಯಬೇಕೆಂದು ಕೋರಿದಾಗ ಮತ್ತು ಡೀಫಾಲ್ಟ್ ಆದಾಗ ಕೋರಿಕೆಯ ಮೇರೆಗೆ ಕಾಯಿದೆಯಲ್ಲಿ ಕಂಡಂತೆ ಸಭೆಯನ್ನು ಕರೆಯಬಹುದು. ಅಕಸ್ಮಾತ್ ಯಾವುದೇ ಸಭೆಗೆ ಕೋರಂಗೆ ಅಗತ್ಯವಾದ ನಿರ್ದೇಶಕರು ಭಾರತ ದೇಶದಲ್ಲಿ ಇಲ್ಲದೇ ಇದ್ದರೆ ಕಂಪನಿಯ ಮಂಡಳಿಯು ಅಥವಾ ಯಾವುದೇ ಇಬ್ಬರು ಸದಸ್ಯರು ವಿಶೇಷ ಸಾಮಾನ್ಯ ಸಭೆಯನ್ನು ಅದೇ ವಿಧಾನದಲ್ಲಿ ಅಂದರೆ ಮಂಡಳಿ ಕರೆಯುವ ಮಾದರಿಯಲ್ಲೇ ಕರೆಯಬಹುದಾಗಿದೆ.

<u>**ಸರ್ವ ಸದಸ್ಯರ ಸಭೆಯ ನಡಾವಳಿಗಳು**</u>

46. ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ವ್ಯವಹರಿಸುವ ಎಲ್ಲಾ ವಿಷಯಗಳು ವಿಶೇಷವೆಂದು ತಿಳಿಯತಕ್ಕದ್ದು, ಆದರೆ ಈ ಕೆಳಕಂಡ ವ್ಯವಹಾರವನ್ನು ಹೊರತುಪಡಿಸಿ :

(1) ಆರ್ಥಿಕ ತಃಖ್ತೆಗಳನ್ನು ಅಂಗೀಕರಿಸುವುದು ಮತ್ತು ಆಡಳಿತ ಮಂಡಳಿಯ ಮತ್ತು ಲೆಕ್ಕಪರಿಶೋಧಕರ ವರದಿಗಳನ್ನು ಅಂಗೀಕರಿಸುವುದು;

(2) ಲಾಭಾಂಶವನ್ನು ಘೋಷಿಸುವುದು;

(3) ನಿವೃತ್ತಿ ಹೊಂದುವ ನಿರ್ದೇಶಕರ ಸ್ಥಾನದಲ್ಲಿ ಬೇರೊಬ್ಬ ನಿರ್ದೇಶಕರನ್ನು ನೇಮಕ ಮಾಡುವುದು;

(4) ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗಧಿಪಡಿಸುವುದು.

47. ಯಾವುದೇ ಸಾಮಾನ್ಯ ಸಭೆಯಾಗಿದ್ದಲ್ಲಿ, ವ್ಯವಹರಿಸುವ ಎಲ್ಲಾ ವಿಷಯಗಳು ವಿಶೇಷವೆಂದು ತಿಳಿಯತಕ್ಕದ್ದು.

48. ಸಭೆಯನ್ನು ಕರೆದ ಸಮಯದಲ್ಲಿ ಕೋರಂ ಇಲ್ಲದೇ ಇದ್ದರೆ ಯಾವುದೇ ಸಾಮಾನ್ಯ ಸಭೆಯಲ್ಲಿ ಯಾವುದೇ ವಿಷಯವನ್ನು ಚರ್ಚಿಸುವಂತಿಲ್ಲಲ ಇಲ್ಲಿ ಅನುಸರಿಸಬೇಕಾದ್ದೇನೆಂದರೆ, ಸಾಮಾನ್ಯ ಸಭೆಯ ಕೋರಂ ಕಾಯಿದೆಯ ಕಲಂ 103 ರಲ್ಲಿ ಕಂಡಂತಿರಬೇಕು.

49. ಸಭೆಯನ್ನು ಕರೆದ ಅರ್ಧ ಗಂಟೆಯವರೆಗೂ ಕೋರಂ ಇಲ್ಲದೇ ಇದಲ್ಲಿ, ಸದರಿ ಸಭೆಯನ್ನು ಸದಸ್ಯರ ಕೋರಿಕೆ ಮೇರೆಗೆ ಕರೆಯಲಾಗಿದ್ದರೆ ಅದನ್ನು ವಿಸರ್ಜಿಸುವುದು, ಇನ್ನಿತರೇ ಸಭೆಗಳಿಗೆ ಸಂಬಂಧಪಟ್ಟಂತೆ ಸದರಿ ಸಭೆಯನ್ನು ಮುಂದಿನ ದಿನಕ್ಕೆ ಮುಂದೂಡುವುದು, ಸದರಿ ಮುಂದೂಡಿದ ದಿನವು ಸಾರ್ವತ್ರಿಕ ರಜೆಯ ದಿನವಾದಲ್ಲಿ ಅದರ ಮುಂದಿನ ದಿನವೇ ಸದರಿ ಸಭೆಯನ್ನು ನಡೆಸತಕ್ಕದ್ದು. ವಾರದಲ್ಲಿ ಅದೇ ದಿನಕ್ಕೆ, ಅದೇ ಸಮಯಕ್ಕೆ, ಅದೇ ಸ್ಥಳಕ್ಕೆ ಮುಂದೂಡುವುದು ಅಥವಾ ಇನ್ಯಾವುದೇ ದಿನ ಮತ್ತು ಸಮಯಕ್ಕೆ ಮಂಡಳಿಯ ಇಚ್ಛೆಯಂತೆ ಮುಂದೂಡುವುದು, ಮುಂದೂಡಿದ ಸಭೆಯಲ್ಲಿ ಅರ್ಧ ಗಂಟೆಯ ವರೆಗೂ ಕೋರಂ ಇಲ್ಲದೇ ಇದ್ದ ಪಕ್ಷದಲ್ಲಿ ಹಾಜರಿರುವ ಸದಸ್ಯರೇ ಕೋರಂ ಆಗುತ್ತದೆ.

೫೦. ಕಂಪನಿಯ ಪ್ರತಿಯೊಂದು ಸರ್ವ ಸದಸ್ಯ ಸಭೆಯನ್ನು ನಿರ್ದೇಶಕ ಮಂಡಳಿಯ ಅಧ್ಯಕ್ಷರು ಅಧ್ಯಕ್ಷತೆ ವಹಿಸತಕ್ಕದ್ದು.

೫೧. ಅಂತಹ ಅಧ್ಯಕ್ಷರು ಇಲ್ಲದೇ ಇದ್ದ ಪಕ್ಷದಲ್ಲಿ ಅಥವಾ ಆತನು ಸಭೆ ಕರೆದ ಹದಿನೈದು ನಿಮಿಷಗಳು ಕಳೆದರೂ ಹಾಜರಾಗದಿದ್ದಲ್ಲಿ ಅಥವಾ ಆತನು ಅಧ್ಯಕ್ಷನಾಗಿರಲು ಒಪ್ಪದೇ ಇದ್ದ ಪಕ್ಷದಲ್ಲಿ, ಉಪಾಧ್ಯಕ್ಷರು ಇದ್ದಲ್ಲಿ ಅವರು ಸದರಿ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಉಪಾಧ್ಯಕ್ಷರು ಸಹಾ ಇಲ್ಲದೇ ಇದ್ದಲ್ಲಿ ಅಥವಾ ಆತನು ಮೇಲ್ಕಂಡಂತೆ ಸದರಿ ಸಭೆಗೆ ಸಮಯಕ್ಕೆ ಸರಿಯಾಗಿ ಆಗಮಿಸಿದೇ ಇದ್ದ ಪಕ್ಷದಲ್ಲಿ ಅಥವಾ ಆತನು ಸಹಾ ಅಧ್ಯಕ್ಷತೆಯನ್ನು ವಹಿಸಲು ನಿರಾಕರಿಸಿದಲ್ಲಿ, ಆಗ ಅಲ್ಲಿ ಹಾಜರಿದ್ದ ಸದಸ್ಯರು ಅವರಲ್ಲೇ ಒಬ್ಬರನ್ನು ಸದರಿ ಸಭೆಗೆ ಅಧ್ಯಕ್ಷರನ್ನಾಗಿ ಆಯ್ಕೆಮಾಡಿಕೊಳ್ಳತಕ್ಕದ್ದು.

೫೨. ಅಧ್ಯಕ್ಷರು ಸಭೆಯ ಒಪ್ಪಿಗೆಯ ಮೇರೆಗೆ ಕೋರಂ ಇದ್ದಾಗ (ಮತ್ತು ಸಭೆಯು ನಿರ್ದೇಶನ ನೀಡಿದರೆ) ಸಭೆಯನ್ನು ಕಾಲ ಕಾಲಕ್ಕೆ ಮತ್ತೆ ಸ್ಥಳದಿಂದ ಸ್ಥಳಕ್ಕೆ ಮುಂದೂಡುವುದು, ಆದರೆ, ಯಾವುದೇ ವ್ಯವಹಾರವು ಅಂತಹ ಮುಂದೂಡಿದ ಸಭೆಗಳಲ್ಲಿ ನಡೆಸತಕ್ಕದ್ದಲ್ಲ ಆದರೆ ಯಾವುದೇ ವಿಷಯವು ಅಸಂಪೂರ್ಣವಾಗಿದ್ದರೆ ಅಂತಹ ವಿಷಯವನ್ನು ಕೈಗೆತ್ತಿಕೊಳ್ಳಬಹುದು. ಸಭೆಯು ಒಂದು ತಿಂಗಳಗಿಂತಲೂ ಹೆಚ್ಚಿನ ಅವಧಿಗೆ ಮುಂದೂಡಲ್ಪಟ್ಟರೆ ಆಗ ಅಸಲಿ ಸಭೆಗೆ ನೀಡುವಂತೆ ಈ ಮುಂದೂಡಿದ ಸಭೆಗೂ ಸಹಾ ಸೂಚನಾ ಪತ್ರವನ್ನು ನೀಡತಕ್ಕದ್ದು. ಆದರೆ, ಮೇಲ್ಕಂಡಂತೆ, ಮುಂದೂಡಲ್ಪಟ್ಟ ಸಭೆಗೆ ಕಾಯಿದೆಯ ಕಲಂ 103 ರನ್ವಯ ಸೂಚನಾ ಪತ್ರವನ್ನು ನೀಡುವ ಅಗತ್ಯವಿಲ್ಲ ಮತ್ತು ಚರ್ಚಿಸುವ ವಿಷಯದ ಬಗ್ಗೆ ಸಹಾ ತಿಳಿಸುವಂತಿಲ್ಲ.

೫೩. ಯಾವುದೇ ಸಾಮಾನ್ಯ ಸಭೆಯಲ್ಲಿ ಠರಾವನ್ನು ಮತಕ್ಕೆ ಇಟ್ಟಾಗ, ಸದರಿ ವಿಷಯವನ್ನು ನಿರ್ಧರಿಸಲು ಕೈಗಳನ್ನು ಮೇಲಕ್ಕೆತ್ತುವುದರ ಮೂಲಕ ನಿರ್ಧರಿಸತಕ್ಕದ್ದು ಆದರೆ ಚುನಾವಣೆಗಾಗಿ ಕಾಯಿದೆಯ ನಿಬಂಧನೆಗಳನುಸಾರವಾಗಿ ಬೇಡಿಕೆ ಇಟ್ಟರೆ (ಕೈಗಳನ್ನು ಮೇಲಕ್ಕೆತ್ತುವುದರ ಮೂಲಕ ಫಲಿತಾಂಶವನ್ನು ಘೋಷಿಸುವ ಮೊದಲು ಅಥವಾ ಘೋಷಿಸಿದ ನಂತರವಾಗಲಿ) ಕಾಯಿದೆಯ ಅನ್ವಯ ಬೇಡಿಕೆ ಇಟ್ಟರೆ, ಅಧ್ಯಕ್ಷರು ಕೈಗಳನ್ನು ಮೇಲಕ್ಕೆತ್ತುವುದರ ಮೂಲಕ ನಿರ್ಣಯಿಸಿರುವುದನ್ನು ಘೋಷಿಸಬಹುದು ಅಥವಾ ಒಮ್ಮತದಿಂದ ಅಥವಾ ಒಂದು ನಿರ್ದಿಷ್ಟವಾದ ಬಹುಮತದಿಂದ ಅಥವಾ ಲಾಟ್‌ಗಳ ಮೂಲಕ ಕಂಪನಿಯ ನಡಾವಳಿಗಳ ಪುಸ್ತಕದಲ್ಲಿ ದಾಖಲಿಸುವುದರ ಮೂಲಕ ಮುಕ್ತಾಯ ಮಾಡಲಾಗುವುದು, ಮತ್ತು ಇದರಲ್ಲಿ ಸದರಿ ಠರಾವಿನ ಪರ ವಿರೋಧ ಬಂದ ಮತಗಳನ್ನು ಪರಿಗಣಿಸುವಂತಿಲ್ಲ.

೫೪. ಕಾಯಿದೆಯ ಕಲಂ 109ರ ನಿಬಂಧನೆಗಳ ಪ್ರಕಾರ ಚುನಾವಣೆಗಾಗಿ ಬೇಡಿಕೆ ಯಿಟ್ಟರೆ, ಅದರಲ್ಲಿ ಗೆಲ್ಲಬೇಕು, ಅದರಂತೆ ಅಧ್ಯಕ್ಷರ ನಿರ್ದೇಶನದಂತೆ ಮತ್ತು ಸದರಿ ಚುನಾವಣೆಯ ಫಲಿತಾಂಶದ ಪ್ರಕಾರ ಠರಾವನ್ನು ನಿರ್ಣಯಿಸತಕ್ಕದ್ದು.

೫೫. ಕೈಗಳನ್ನು ಮೇಲಕ್ಕೆ ಎತ್ತುವುದರ ಮೂಲಕ ಅಥವಾ ಚುನಾವಣೆಯ ಮೂಲಕವಾಗಲೀ ವಿಷಯದ ಪರ ಮತ್ತು ವಿರೋಧವಾಗಿ ಸಮ ಮತಗಳು ಬಂದಲ್ಲಿ ಸಭೆಯ ಅಧ್ಯಕ್ಷರು ತಮ್ಮ ಕೈಯನ್ನು ಮೇಲಕ್ಕೆತ್ತುವ ಮೂಲಕ ಅಥವಾ ಮತದಾನ ಮಾಡುವುದರ ಮೂಲಕ ತಮಗೆ ಇರುವ ಎರಡನೇ ಮತವನ್ನು ಚಲಾಯಿಸಿ ವಿಷಯವನ್ನು ತೀರ್ಮಾನಿಸುವುದು.

೫೬. ಅಧ್ಯಕ್ಷರನ್ನು ಆಯ್ಕೆ ಮಾಡುವ ವಿಚಾರದಲ್ಲಿ ಮತದಾನಕ್ಕಾಗಿ ಬೇಡಿಕೆಯಿಟ್ಟರೆ ಅಥವಾ ಮುಂದೂಡಲ್ಪಟ್ಟಲ್ಲಿ, ಯಾವುದೇ ಕಾರಣದಿಂದ ಮತದಾನಕ್ಕಾಗಿ ಬೇಡಿಕೆ ಇಟ್ಟಲ್ಲಿ ವಿಷಯವನ್ನು ಮುಂದೂಡಲಾಗುವುದು. ಸಭೆಯ ಅಧ್ಯಕ್ಷರ ನಿರ್ದೇಶನದಂತೆ ಯಾವುದೇ ಪ್ರಶ್ನೆಗೆ ಸಂಬಂಧಪಟ್ಟ ವಿಷಯವನ್ನು ಮುಂದೂಡಲಾಗುವುದು. ಆದರೆ ಇದು ಬೇಡಿಕೆಯಿಟ್ಟ ನಲವತ್ತೆಂಟು ಗಂಟೆಗಳ ಒಳಗಾಗಿ ಸಭೆಯನ್ನು ನಡೆಸತಕ್ಕದ್ದು.

## ಸದಸ್ಯರ ಮತದಾನ

57. ಯಾವುದೇ ವರ್ಗದ ವರ್ಗಗಳ ಷೇರುಗಳಿಗೆ ಸಂಬಂಧಪಟ್ಟಂತೆ ಹಕ್ಕುಗಳು ಅಥವಾ ನಿರ್ಬಂಧಗಳ ಬಗ್ಗೆ ಹಾಜರಿರುವ ಪ್ರತಿಯೊಬ್ಬ ಸದಸ್ಯರು ಕೈಗಳನ್ನು ಎತ್ತುವ ಮೂಲಕ ಒಂದು ಮತವನ್ನು ಹೊಂದಿರುತ್ತಾರೆ. ಮತ ಚಲಾಯಿಸಲು ಸಹಾ ಪ್ರತಿಯೊಬ್ಬ ಸದಸ್ಯರು ಒಂದು ಷೇರಿಗೆ ಒಂದು ಮತವನ್ನು ಹೊಂದಿರುತ್ತಾರೆ. ಆದರೆ, ಸರ್ಕಾರಕ್ಕೆ ಸಂಬಂಧಪಟ್ಟಂತೆ ಅವರ ಪರವಾಗಿ ಒಂದು ಮತವನ್ನು ನೀಡಲಾಗುವುದು, ಅದರಂತೆ ಅವರು ತಮ್ಮ ಮತವನ್ನು ಕೈ ಎತ್ತುವ ಮೂಲಕ ಅಥವಾ ಮತದಾನದ ಮೂಲಕ ಮತವನ್ನು ನೀಡಬಹುದು, ಅವರು ಸದಸ್ಯರಾಗಿರಬಹುದು ಅಥವಾ ಅಧಿಕೃತ ಪ್ರತಿನಿಧಿಯಾಗಿರಬಹುದು ಅವರು ಕಂಪನಿಯ ಸಭೆಗಳಲ್ಲಿ ಹಾಜರಿದ್ದು ಮತ ನೀಡುವುದು. ಸರ್ಕಾರವು ತಾನು ಅಧಿಕಾರ ನೀಡಿರುವ ವ್ಯಕ್ತಿಗೆ ತನ್ನ ಪರವಾಗಿ ನೀಡಿರುವ ಅಧಿಕಾರವನ್ನು ವಾಪಸ್ಸು ಪಡೆಯಬಹದು ಅಥವಾ ರದ್ದು ಪಡಿಸಬಹುದು ಮತ್ತು ಹೊಸದಾಗಿ ಪ್ರಾತಿನಿಧ್ಯವನ್ನು ನೀಡಬಹುದು. ಆದೇಶ ಅಥವಾ ಸರ್ಕಾರವು ಭಾರತದ ಸಂವಿಧಾನದ ಪ್ರಕಾರ ನೀಡಿರುವ ಅಧಿಕಾರವನ್ನು ಮೇಲ್ಕಂಡಂತೆ ದೃಢೀಕರಿಸುವುದು ಅಥವಾ ಹಿಂದಕ್ಕೆ ಪಡೆಯುವುದು ಇದು ಅಂತಿಮ ಪುರಾವೆಯಾಗಿರುತ್ತದೆ.

58. ಮೇಲ್ಕಂಡಂತೆ ಸರ್ಕಾರದ ಪರವಾಗಿ ಮತ ಚಲಾಯಿಸಲು ಸರ್ಕಾರವು ಯಾರಿಗೆ ಅಧಿಕಾರವನ್ನು ನೀಡುತ್ತದೆಯೋ, ಅಂತಹ ಅಧಿಕಾರವು ಸರ್ಕಾರದ ಆದೇಶದನ್ವಯ ಅಧಿಕೃತಗೊಂಡಿರುತ್ತದೆಯೋ, ಅದು ಇನ್ನೊಬ್ಬರನ್ನು ನೇಮಕ ಮಾಡಬಹುದು, (ಅವರು ಸದಸ್ಯರಾಗಿರಬಹುದು ಇಲ್ಲದಿರಬಹುದು) ಅವರ ಪ್ರತಿನಿಧಿಯಾಗಿರ ಬಹುದು ಅಥವಾ ಬದಲೀ ಪ್ರಾಧಿಕಾರವಾಗಿರಲಿ, ಅದು ವಿಶೇಷ ಅಥವಾ ಸಾಮಾನ್ಯದ್ದಾಗಿರಬಹುದು, ಅದು ಸರ್ಕಾರದ ಪರವಾಗಿ ಕೈ ಎತ್ತುವ ಮೂಲಕ ಅಥವಾ ಮತದಾನದ ಮೂಲಕ ಮತ ಚಲಾಯಿಸಲು ಅರ್ಹವಾಗಿರುತ್ತದೆ.

59. ಒಂದು ವೇಳೆ ಜಂಟಿ ಷೇರುದಾರರಾಗಿದ್ದರೆ, ಹಿರಿಯರು ಯಾರು ಮತವನ್ನು ಚಲಾಯಿಸುತ್ತಾರೋ ಅವರು ತಾವೇ ಖುದ್ದಾಗಿ ಬಂದು ಅಥವಾ ಅವರ ಪ್ರತಿನಿಧಿಯ ಮೂಲಕವಾಗಲೀ ಚಲಾಯಿಸಬಹುದು, ಆಗ ಇತರೇ ಜಂಟಿ ಷೇರುದಾರರು ಮತ್ತು ಈ ವಿಷಯವಾಗಿ ಸದಸ್ಯರ ಪುಸ್ತಕದಲ್ಲಿ ನೋಂದಣಿಮಾಡಿದ ಸದಸ್ಯರ ಹಿರಿತನವನ್ನು ಪರಿಗಣಿಸಲಾಗುವುದು.

60. ಮನಸ್ಥಿಮಿತವಿಲ್ಲದವರು ಅಥವಾ ನ್ಯಾಯಾಲಯದ ಆದೇಶದ ಪ್ರಕಾರ ಆತನು ಹುಚ್ಚನಾದರೂ ಸಹಾ ಕೈಗಳನ್ನು ಎತ್ತುವ ಮೂಲಕ ಅಥವಾ ಚುನಾವಣೆ ಮೂಲಕ ಮತವನ್ನು ಚಲಾಯಿಸಬಹುದು, ಆತನ ಸಮಿತಿಯ ಮೂಲಕ ಅಥವಾ ಕಾನೂನಿ ಪೋಷಕರ ಮೂಲಕ ಮತ್ತು ಸದರಿ ಸಮಿತಿ ಅಥವಾ ಪೋಷಕರು ಮತಚಲಾಯಿಸಬಹುದು ಅಥವಾ ಪ್ರತಿನಿಧಿಯ ಮೂಲಕ ಮತವನ್ನು ಚಲಾಯಿಸಬಹುದು.

61. ಯಾರು ಕರೆಗಳ ಅಥವಾ ಹಾಲಿ ಇತರೇ ಹಣಗಳನ್ನು ಕಂಪನಿಗೆ ಷೇರುಗಳ ಬಗ್ಗೆ ಯಾರು ಪಾವತಿ ಮಾಡಿರುವುದಿಲ್ಲವೋ ಅಂತಹ ಸದಸ್ಯರು ಯಾವುದೇ ಸರ್ವ ಸದಸ್ಯರ ಸಭೆಯಲ್ಲಿ ಮತಚಲಾಯಿಸಲು ಅಧಿಕಾರವಿರುವುದಿಲ್ಲ.

62. ಚುನಾವಣೆಯಲ್ಲಿ ಮತವನ್ನು ಖುದ್ದಾಗಿ ಅಥವಾ ಅಧಿಕೃತ ಪ್ರತಿನಿಧಯ ಮೂಲಕವಾಗಲೀ ಚಲಾಯಿಸಬಹುದು ಆದರೆ ಕಂಪನಿಯು ಪ್ರತಿನಿಧಿಯನ್ನು ಕಳುಹಿಸಿ ಮತಚಲಾಯಿಸಲು ಬರುವುದಿಲ್ಲ, ಅಂದರೆ, ಸದರಿ ಕಂಪನಿಯ ನಿರ್ದೇಶಕರು ಒಂದು ಠರಾವಿನ ಮೂಲಕ ನಿರ್ಣಯವನ್ನು ತೆಗೆದುಕೊಂಡ ನಂತರ ಯಾವುದೇ ವ್ಯಕ್ತಿಯನ್ನು ಕಂಪನಿಯ ಪ್ರತಿನಿಧಿಯಾಗಿ ಕಂಪನಿಯ ಯಾವುದೇ ಸಭೆಗೆ ಕಳುಹಿಸಬಹುದು. ಸದರಿ ಠರಾವನ್ನು ಕಾಯಿದೆಯ ಹಾಲಿ ಚಾಲ್ತಿಯಲ್ಲಿರುವ ಯಾವುದೇ ನಿಬಂಧನೆಗಳನುಸಾರವಾಗಿ ನಿರ್ಣಯವನ್ನು ತೆಗೆದುಕೊಳ್ಳತಕ್ಕದ್ದು.

63. ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಅಧಿಕೃತ ಪ್ರತಿನಿಧಿಯನ್ನು [ಪ್ರಾಕ್ಸಿ] ನೇಮಕ ಮಾಡುವವರು ಅದನ್ನು ತಮ್ಮ ಸಹಿಯೊಂದಿಗೆ ಅಥವಾ ತಮ್ಮ ಅಧಿಕೃತ ಪ್ರತಿನಿಧಯಿಂದ ಲಿಖಿತ ಪೂರ್ವಕವಾಗಿ ಬರೆದುಕೊಡತಕ್ಕದ್ದು. ಅದಾಗಿ ನೇಮಕ ಮಾಡುವವರು ಸಂಸ್ಥೆಯಾಗಿರುವುದರಿಂದ ತಮ್ಮ ಸಹಿ ಮತ್ತು ಮೊಹರು ಸಹಿತವಾಗಿ ಅಥವಾ ತಾನು ಅಧಿಕಾರಿಯ ಹೋದಾದಲ್ಲಿ ಅಥವಾ ತನ್ನ ಪ್ರತಿನಿಧಿಯಿಂದಲಾದರೂ ಬರೆದುಕೊಡತಕ್ಕದ್ದು.

64. ಸಂಸ್ಥೆಯು ಅಧಿಕೃತ ಪ್ರತಿನಿಧಿ ಮತ್ತು ಅಧಿಕಾರ ಪತ್ರವನ್ನು ಅಥವಾ ಇನ್ನ್ಯಾವುದೇ ಪ್ರಾಧಿಕಾರವು ಯಾವುದಾದರೂ ಇದ್ದಲ್ಲಿ ಅದು ತನ್ನ ಸಹಿಯೊಂದಿಗೆ ಅಥವಾ ನೋಟರೀಯವರಿಂದ ಪ್ರಮಾಣೀಕರಿಸಿದ ಅಧಿಕಾರ ಪತ್ರದ ನಕಲನ್ನು ಕಂಪನಿಯ ನೋಂದಣಿ ಕಛೇರಿಯಲ್ಲಿ ಸಭೆಯು ನಡೆಯುವ ಅಥವಾ ಮುಂದೂಡಿದ ಸಭೆ ನಡೆಯುವ ಕನಿಷ್ಟ 48 ಗಂಟಗಳಿಗಿಂತಲೂ

ಮುಂಚಿತವಾಗಿ ಸಲ್ಲಿಸತಕ್ಕದ್ದು ಅದರಲ್ಲಿ ಮತಚಲಾಯಿಸುವ ವ್ಯಕ್ತಿಯ ಹೆಸರನ್ನು ಕನಿಷ್ಟ ಪಕ್ಷ 24 ಗಂಟೆಗಳ ಮುಂಚಿತವಾಗಿ ನಮೂದಿಸಿರತಕ್ಕದ್ದು ಮತ್ತು ಅಧಿಕೃತ ಪ್ರತಿನಿಧಿಯು ಗೈರುಹಾಜರಾದರೆ ಅದು ಮಾನ್ಯವಲ್ಲ.

೬೫. ಅಧಿಕೃತ ಪ್ರತಿನಿಧಿಯಾಗಿ ನೇಮಕಗೊಳ್ಳುವ ಸಾಧನವು ಕಾಯಿದೆಯ ಕಲಂ ೧೦೫ ಮತ್ತು ಅದರಡಿ ರಚಿಸಿ ಓದಲಾದ ನಿಯಮಗಳಡಿಯಲ್ಲಿ ಕಂಡ ನಮೂನೆಯಲ್ಲಿದ್ದಂತೆ ಇರತಕ್ಕದ್ದು.

## ನಿರ್ದೇಶಕರು

66. ಸರ್ಕಾರವು ತೀರ್ಮಾನಿಸಿದಂತೆ ನಿರ್ದೇಶಕರ ಸಂಖ್ಯೆ ಕನಿಷ್ಟ ಏಳು ಗರಿಷ್ಟ ಹದಿನೈದು. ಮೊದಲ ನಿರ್ದೇಶಕರು ಮತ್ತು ತದನಂತರದ ನಿರ್ದೇಶಕರು ಸರ್ಕಾರವು ಕಾಲ ಕಾಲಕ್ಕೆ ನಿರ್ಧರಿಸಿದಂತೆ ಸರ್ಕಾರದಿಂದ ನೇಮಕಗೊಳ್ಳುವರು. ಹಾಗೆ ನೇಮಕಗೊಂಡ ನಿರ್ದೇಶಕರನ್ನು ಸರ್ಕಾರವು ಕಾಲ ಕಾಲಕ್ಕೆ ವಜಾಗೊಳಸುವ ಹಕ್ಕನ್ನು ಹೊಂದಿರುತ್ತದೆ. ಹಾಗೆ ವಜಾಗೊಂಡು ತೆರವುಗೊಂಡ ಸ್ಥಳಕ್ಕೆ ಅಥವಾ ಇನ್ನಾವುದೇ ರೀತಿಯಲ್ಲಿ, ಅಂದರೆ, ರಾಜಿನಾಮೆ, ಮರಣ ಅಥವಾ ಇನ್ನಾವುದೇ ವಿಧದಲ್ಲಿ ನಿರ್ದೇಶಕರ ಹುದ್ದೆಯು ಖಾಲಿಯಾದರೆ, ಸದರಿ ತೆರವಾದ ಸ್ಥಾನಕ್ಕೆ ಬೇರೊಬ್ಬರನ್ನು ನಿರ್ದೇಶಕರನ್ನಾಗಿ ನೇಮಿಸುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಆ ವಿಧವಾಗಿ ನೇಮಕಗೊಂಡ ನಿರ್ದೇಶಕರಿಗೆ ನಿವೃತ್ತಿ ಇರುವುದಿಲ್ಲ, ಆದರೆ ಸರ್ಕಾರದ ವಿಶೇಷ ಸೂಚನೆ ಮೇರೆಗೆ ಅಥವಾ ಸರ್ಕಾರವು ಇನ್ನೊಬ್ಬರನ್ನು ನಿರ್ದೇಶಕರನ್ನಾಗಿ ನೇಮಕಗೊಂಡಾಗ ಮಾತ್ರ ನಿವೃತ್ತಿ ಇರುತ್ತದೆ.

66(ಎ). ಒಂದು ವೇಳೆ ಆಡಳತ ಮಂಡಳಯು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾ (ಐಡಿಬಿಐ), ಇಂಡಸ್ಟ್ರಿಯಲ್ ಫೈನಾನ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ (ಐಎಫ್‌ಸಿಐ), ದಿ ಇಂಡಸ್ಟ್ರಿಯಲ್ ಕ್ರೆಡಿಟ್ ಅಂಡ್ ಇನ್ವೆಸ್ಟ್‌ಮೆಂಟ್ ಕಾರ್ಪೋರೇಷನ್ ಆಫ್ ಇಂಡಿಯಾ (ಐಸಿಐಸಿಐ), ದಿ ಲೈಫ್ ಇನ್ಸೂರೆನ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ (ಎಲ್‌ಐಸಿ) ಅಥವಾ / ದಿ ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ (ಯುಟಿಐ) ಅಥವಾ ಕರ್ನಾಟಕ ಸ್ಟೇಟ್ ಫೈನಾನ್ಸಿಯಲ್ ಕಾರ್ಪೋರೇಷನ್ (ಕೆಎಸ್‌ಎಫ್‌ಸಿ) ಅಥವಾ ದಿ ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಇನ್‌ಫ್ರಾಸ್ಟ್ರಕ್ಚರ್ ಅಂಡ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್ (ಕೆಎಸ್‌ಐಐಡಿಸಿ) ಅಥವಾ ಇತರೇ ಯಾವುದೇ ಕ್ರೆಡಿಟ್ ಸಂಸ್ಥೆಗಳು ಅಥವಾ ನ್ಯಾಷನಲೈಜ್ಡ್ ಬ್ಯಾಂಕ್‌ಗಳನ್ನು ಕಂಪನಿಗೆ ಆರ್ಥಿಕ ಸಹಾಯವನ್ನು ಸಾಲವಾಗಿ, ಡಿಬೆಂಚರ್‌ಗಳಗೆ/ಬಾಂಡ್‌ಗಳಗೆ ಚಂದಾ ನೀಡುವಂತೆ ಮತ್ತು ಯಾವುದೇ ಜಾಮೀನು ಅಥವಾ ಅಂಡರ್‌ಟೇಕಿಂಗ್ ಅಥವಾ ಕಂಪನಿಯ ಷೇರುಗಳಗೆ ಚಂದಾ, ನಿರ್ದೇಶಕರು/ಗಳು ಅದನ್ನು ಅಂಗೀಕರಿಸಲು ಅಧಿಕಾರವುಳ್ಳವರೆಂದು ಇದು ಕಾಯಿದೆಯ ಅನುಸಾರವಾಗಿದೆಯೆಂದು ಮತ್ತು ಸದರಿ ಸಂಸ್ಥೆಗಳು ಸದರಿ ಸಾಲದ ಅವಧಿಯಲ್ಲಿ ಒಬ್ಬರು ಅಥವಾ ಅದಕ್ಕಿಂತ ಹೆಚ್ಚು ಸದಸ್ಯರನ್ನು ಕಂಪನಿಯ ನಿರ್ದೇಶಕರ ಮಂಡಳಗೆ ನಿರ್ದೇಶಕರನ್ನಾಗಿ ಒಂದು ನಿಗಧಿತ ಅವಧಿಯ ವರೆಗೂ ನೇಮಿಸುವಂತೆ ಬೇಡಿಕೆ ಇಡಬಹುದು. ಇದಕ್ಕೆ ಅಂಗೀಕರಿಸಿದಲ್ಲಿ ಸದರಿ ಸಂಸ್ಥೆಗಳಂದ ನೇಮಕಗೊಂಡ ನಿರ್ದೇಶಕ / ನಿರ್ದೇಶಕರಿಗೆ ವಾಡಿಕೆಯ ಪ್ರಕಾರ ನಿವೃತ್ತಿ ಇರುವುದಿಲ್ಲ ಮತ್ತು ನಿರ್ದೇಶಕರಾಗಲು ಹೊಂದಿರತಕ್ಕಂತಹ ಷೇರುಗಳನ್ನು ಹೊಂದಿರ ಬೇಕೆಂಬ ಷರತ್ತಿನ ಅವಶ್ಯಕತೆ ಇರುವುದಿಲ್ಲ. ಆಡಳತ ಮಂಡಳಯು ಈ ಮೂಲಕ ಅಂಗೀಕರಿಸಿರುವುದೇನೆಂದರೆ, ಮೇಲ್ಕಂಡ ಸಂಸ್ಥೆಗಳು / ಬ್ಯಾಂಕುಗಳು ತಾವು ನೇಮಕ ಮಾಡಿರುವ ನಿರ್ದೇಶಕರನ್ನು ತೆಗೆದು ಹಾಕಿ ಅವರ ಬದಲು ಬೇರೆಯವರನ್ನು ನೇಮಕ ಮಾಡಿದರೆ ಅಥವಾ ನಾಮ ನಿರ್ದೇಶನ ಮಾಡಿದರೆ ಕಂಪನಿಗೆ ಯಾವುದೇ ಅಭ್ಯಂತರವಿಲ್ಲ ಹಾಗೂ ಹಾಗೆ ನೇಮಕ ಮಾಡಿದ ನಂತರ ಇನ್ನೂ ನಿರ್ದೇಶಕರ ಸ್ಥಾನಗಳು ಯಾವುದೇ ನಿರ್ದೇಶಕರನ್ನು ಸದರಿ ಸ್ಥಾನದಿಂದ ತೆಗೆದು ಹಾಕಿದ್ದರೆ ಆಗ ತೆರವಾಗಿದ್ದ ಸದರಿ ಸ್ಥಾನಗಳನ್ನು ಸಹಾ ಸದರಿ ಸಂಸ್ಥೆ ಯಾ ಬ್ಯಾಂಕ್‌ನವರು ತುಂಬಬಹುದು. ಈ ಜ್ಞಾಪನಾ ಪತ್ರದ ಪ್ರಕಾರ ನೇಮಕಗೊಂಡಿರುವ ನಿರ್ದೇಶಕರು/ಗಳು ಎಲ್ಲಾ ವಿಧವಾದ ಸವಲತ್ತುಗಳನ್ನು ಅನುಭವಿಸಲು ಅಧಿಕಾರವನ್ನು ಚಲಾಯಿಸಲು ಕಂಪನಿಯ ಇತರೇ ನಿರ್ದೇಶಕರಂತೆ ಸಂಪೂರ್ಣ ಹಕ್ಕನ್ನು ಹೊಂದಿದವರಾಗಿರುತ್ತಾರೆ. ಅಂದರೆ ಕಂಪನಿಯ ನಿರ್ದೇಶಕರು/ಗಳು ಹೇಗೆ ಸಂಭಾವನೆ, ಪ್ರಯಾಣ ಭತ್ಯ ಮತ್ತು ತಂಗುವ ಖರ್ಚುವೆಚ್ಚಗಳನ್ನು ಪಡೆಯುತ್ತಾರೋ ಅದೇ ವಿಧದಲ್ಲಿ ಪಡೆಯಲು ಸಂಸ್ಥೆ/ಗಳು, ಬ್ಯಾಂಕ್/ಗಳಂದ ನೇಮಕಗೊಂಡ ನಿರ್ದೇಶಕರು/ಗಳು ಸಹಾ ಅರ್ಹರಾಗಿರುತ್ತಾರೆ. ಮತ್ತು ಇವರು ಸಾಮಾನ್ಯ ಸಭೆ, ಸರ್ವ ಸದಸ್ಯರ ಸಭೆ ಮತ್ತು ಯಾವುದೇ ಸಮಿತಿಯ ಸಭೆಗೆ ಇವರು ಸದಸ್ಯರಾಗಿದ್ದು, ಸೂಚನಾ ಪತ್ರ, ಅಜೆಂಡಾ ಕಾಗದ ಪತ್ರಗಳು ಮತ್ತು ಸಭೆಯ ಮಿನಿಟ್ಸ್ ಇತ್ಯಾದಿಗಳನ್ನು ಸಂಸ್ಥೆ/ಗಳಂದ, ಬ್ಯಾಂಕ್/ಗಳಂದ ನೇಮಕಗೊಂಡವರು ಮತ್ತು ಅವರು ಆಸೀನರಾಗುವುದಕ್ಕೆ ಪಡೆಯುವ ಶುಲ್ಕ ಮತ್ತು ಅವರಿಗೆ ಪಾವತಿಸ ಬೇಕಾದ ಇತರೇ ಸಂಭಾವನೆಗಳನ್ನು ಕಂಪನಿಯು ಸದರಿ ನೇಮಕಮಾಡಿದ ಸಂಸ್ಥೆ/ಗಳಗೆ,

ಬ್ಯಾಂಕ್/ಗಳಗೆ ಸದರಿ ಸಂಸ್ಥೆ/ಗಳ, ಬ್ಯಾಂಕ್(ಗಳ) ನಿಯಮಾವಳಗಳ ಅವರಿಂದ ನೇಮಕಗೊಂಡ ನಿರ್ದೇಶಕರು/ಗಳು ಮೇಲ್ಕಂಡಂತೆ ಸಭೆಗಳಗೆ ಹಾಜರಾಗಲು, ಪ್ರಯಾಣ ಭತ್ಯ ಮತ್ತು ತಂಗುವ ಖರ್ಚುವೆಚ್ಚಗಳನ್ನು ಸದರಿ ಸಂಸ್ಥೆ/ಗಳ, ಬ್ಯಾಂಕ್‌ಗಳ ನಿಯಮಾವಳಗಳ ಪ್ರಕಾರ ಹಿಂದಿರುಗಿಸತಕ್ಕದ್ದು. ಈ ಮೇಲೆ ತಿಳಸಿರುವ ಅಥವಾ ತಿಳಸದೇ ಇರುವ ವಿಷಯಗಳು ಮತ್ತು ಸದರಿ ಸಾರ್ವಜನಿಕ ಆರ್ಥಿಕ ಸಂಸ್ಥೆ/ಗಳು/ಬ್ಯಾಂಕ್‌ಗಳು ಮತ್ತು ಅಥವಾ ಇತರೇ ವ್ಯಕ್ತಿಗಳ ಸಂಖ್ಯೆ ಎರಡು ನಿರ್ದೇಶಕರಗಿಂತ ಹೆಚ್ಚಾಗಿರಬಾರದು.

66(ಬಿ). ಸರ್ಕಾರದಿಂದ ನೇಮಕಗೊಂಡ ನಿರ್ದೇಶಕರುಗಳಲ್ಲಿ (ಆರ್ಟಿಕಲ್ 66 ರಂತೆ) :

1. ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ;
2. ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ಆರ್ಥಿಕ ಇಲಾಖೆ;
3. ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ಸಾರ್ವಜನಿಕ ಉದ್ದಿಮೆ ಇಲಾಖೆ; [ಡಿಪಿಇ].
4. ಆಯುಕ್ತರು, ಕೈಗಾರಿಕಾ ಅಭಿವೃದ್ಧಿ ಮತ್ತು ನಿರ್ದೇಶಕರು, ಕೈಗಾರಿಕೆಗಳು ಮತ್ತು ವಾಣಿಜ್ಯ ಇಲಾಖೆ.

ಅಥವಾ ಇತರೇ ಪ್ರತಿನಿಧಿಗಳು, ಅವರ ಶ್ರೇಣಿ ಉಪ ಕಾರ್ಯದರ್ಶಿಯವರ ಶ್ರೇಣಿಗಿಂತಲೂ ಕಡಿಮೆ ಇರಬಾರದು, ಅವರನ್ನು ಮಂಡಳಯ ನಿರ್ದೇಶಕರನ್ನಾಗಿ ನೇಮಕ ಮಾಡತಕ್ಕದ್ದು.

67. ನಿರ್ದೇಶಕರುಗಳ ಸಂಭಾವನೆಯನ್ನು ಸರ್ಕಾರವು ಕಾಲ ಕಾಲಕ್ಕೆ ನಿರ್ಧರಿಸುವುದು.

68. ನಿರ್ದೇಶಕರು ಯಾವುದೇ ಅರ್ಹತಾ ಷೇರುಗಳನ್ನು ಹೊಂದುವ ಅವಶ್ಯಕತೆ ಇಲ್ಲ.

## <u>ನಿರ್ದೇಶಕರ ಅಧಿಕಾರಗಳು ಮತ್ತು ಕರ್ತವ್ಯಗಳು</u>

69. ಕಂಪನಿಯ ವ್ಯವಹಾರವನ್ನು (ಕಾರ್ಯನಿರ್ವಾಹಕ ಕಾರ್ಯಗಳು) ವ್ಯವಸ್ಥಾಪಕ ನಿರ್ದೇಶಕರು ನಿರ್ವಹಿಸತಕ್ಕದ್ದು, ಆದರೆ, ಸಾಮಾನ್ಯ ಸಭೆಯಲ್ಲಿ ಕಂಪನಿಯು ರಚಿಸಿದ ನಿಯಮಾವಳಗಳನ್ನು ಮಂಡಳ/ವ್ಯವಸ್ಥಾಪಕ ನಿರ್ದೇಶಕರು ಸಭೆಗಿಂತಲೂ ಮುಂಚೆ ಮಾಡಿರುವುದನ್ನು ಅನೂರ್ಜಿತಗೊಳಸಬಹುದು, ಆದರೆ ಸದರಿ ನಿಯಮಾವಳಗಳು ರಚಿಸಿದೇ ಇದ್ದರೆ ಅವು ಊರ್ಜಿತವಾಗುವುವು.

70. ನಿರ್ದೇಶಕರು ತಮಗೆ ಸರಿಯೆಂದು ಕಂಡು ಬಂದಾಗಲೆಲ್ಲಾ ಯಾವುದೇ ಉಪ ನಿಯಮಗಳನ್ನು ಅಥವಾ ನಿಯಮಗಳನ್ನು ಕಂಪನಿಯ ನಿಯಮಾವಳಗಳಲ್ಲಿ ಕಂಡ ಧ್ಯೇಯೋದ್ದೇಶಗಳಗೆ ಅಸಮಂಜಸವಾಗಿದ್ದರೂ ಸರಿ ಮತ್ತು ಈ ಜ್ಞಾಪನಾ ಪತ್ರದಲ್ಲ ಕಂಡ ನಿಯಮಾವಳಗಳಗೂ ಅಸಮಂಜಸವಾಗಿದ್ದರೂ ಸಹಾ ಕಂಪನಿಯ ವ್ಯವಹಾರದ ನಡವಳಕೆ ಮತ್ತು ನಿಯಮಾವಳಗಳಗೆ ಸಹಾ ಮತ್ತು ನಿರ್ದೇಶಕರ ಮತ್ತು ಇದರ ಅಧಿಕಾರಿಗಳ ಮತ್ತು ಸೇವಕರ ಮತ್ತು ಇತರೇ ವಿಷಯಗಳಗೆ ಸಂಬಂಧಪಟ್ಟಂತೆ ಉಪನಿಯಮಗಳು ಅಥವಾ ನಿಯಮಗಳಗೂ ಬೇರೆಯಾಗಿರಬಹುದು ಅಥವಾ ಅವು ಪುನರಾವರ್ತಿತವಾಗಬಹುದು.

71. ಸರ್ಕಾರವು ಕಾಲ ಕಾಲಕ್ಕೆ ಒಬ್ಬರು ಅಥವಾ ಅದಕ್ಕಿಂತಲೂ ಹೆಚ್ಚು ನಿರ್ದೇಶಕರನ್ನು ಮಂಡಳಗೆ ನೇಮಕ ಮಾಡಬಹುದು ಮತ್ತು ವ್ಯವಸ್ಥಾಪಕ ನಿರ್ದೇಶಕರನ್ನು ಸರ್ಕಾರವು ನೇಮಕ ಮಾಡುತ್ತದೆ. ಕಾಯಿದೆಯ ಕಲಂ 196(2), (4) ಮತ್ತು (5) ಮತ್ತು ಕಲಂ 197 ಕಂಪನಿಗೆ ಅನ್ವಯವಾಗುವುದಿಲ್ಲ.

72. ಈ ಜ್ಞಾಪನಾ ಪತ್ರದ ಪ್ರಕಾರ ಸರ್ಕಾರವು ಒಪ್ಪಿಕೊಂಡು ವ್ಯವಸ್ಥಾಪಕ ನಿರ್ದೇಶಕರು ಅಥವಾ ವ್ಯವಸ್ಥಾಪಕರಿಗೆ ತತ್ಕಾಲಕ್ಕೆ ಕೆಲವು ಅಧಿಕಾರಗಳನ್ನು ಚಲಾಯಿಸಲು ಸೂಕ್ತ ಅನುಮತಿಯನ್ನು ನೀಡಿರುತ್ತದೆ. ಸದರಿ ಅಧಿಕಾರವು ಸದರಿ ಅವಧಿಗೆ ಸದರಿ ಉದ್ದೇಶಗಳಗಾಗಿ ಮತ್ತು ಸದರಿ ಷರತ್ತುಗಳನ್ವಯ ಮತ್ತು ಸದರಿ ನಿರ್ಬಂಧಗಳೊಂದಿಗೆ ಆದಷ್ಟು ಶೀಘ್ರವಾಗಿ ನೆರವೇರಿಸಲು ಮತ್ತು ಅವರು ಸದರಿ ಅಧಿಕಾರಗಳನ್ನು ಒಂಟಿಯಾಗಿ ಅಥವಾ ಸಹಕಾರದೊಂದಿಗೆ ಆಡಳತ ಮಂಡಳಯ ಎಲ್ಲಾ ಅಧಿಕಾರಗಳನ್ನು ಬಳಸಿಕೊಂಡು ಅಥವಾ ಎಲ್ಲಾ ಅಥವಾ ಯಾವುದಾದರೊಂದು ಅಧಿಕಾರವನ್ನು ಅವುಗಳನ್ನು

ಹೊರತುಪಡಿಸಿ ಅವುಗಳನ್ನು ರದ್ದು ಮಾಡುವುದು, ಹಿಂಪಡೆಯುವುದು ಮಾರ್ಪಾಡು ಮಾಡುವುದು, ಇತ್ಯಾದಿಗಳನ್ನು ಮಾಡಬಹುದು.

73. ಮಂಡಳಿಯು ಕಾಯಿದೆಯ ನಿಬಂಧನೆಗಳನ್ನು ಅನುಸರಿಸಿತಕ್ಕದ್ದು ಅಥವಾ ತತ್ಕಾಲಕ್ಕೆ ಚಾಲ್ತಿಯಲ್ಲಿರುವ ಯಾವುದೇ ಶಾಸನಬದ್ಧ ತಿದ್ದುಪಡಿಗಳು ಮತ್ತು ವಿಶೇಷವಾಗಿ ಕಂಪನಿಯ ಸೊತ್ತುಗಳ ಅಡಮಾನ ಮತ್ತು ಚಾರ್ಜ್‌ಗಳನ್ನು ನೋಂದಣಿ ಮಾಡಿಸುವಾಗ ಅಥವಾ ಅದರಿಂದ ಸೃಜಿಸಲ್ಪಟ್ಟ ಮತ್ತು ನಿರ್ದೇಶಕರ ದಾಖಲಾತಿ ರಿಜಿಸ್ಟರ್‌ನ್ನು ನಿರ್ವಹಿಸುವುದು ಮತ್ತು ನೋಂದಣಾಧಿಕಾರಿಗಳಿಗೆ ಸದಸ್ಯರ ವಾರ್ಷಿಕ ಪಟ್ಟಿಯನ್ನು ಮತ್ತು ಅದರ ಬಗ್ಗೆ ಸಂಕ್ಷಿಪ್ತ ವರದಿಯನ್ನು ಕಳುಹಿಸುವುದು ಮತ್ತು ಒಗ್ಗೂಡಿಸುವ ಬಗ್ಗೆ ಅಥವಾ ಷೇರು ಬಂಡವಾಳವನ್ನು ಹೆಚ್ಚಿಸುವ ಬಗ್ಗೆ ಅಥವಾ ಷೇರುಗಳನ್ನು ದಾಸ್ತಾನಾಗಿ ಮಾರ್ಪಾಡು ಮಾಡುವ ಬಗ್ಗೆ ಸೂಚನಾ ಪತ್ರವನ್ನು ಮತ್ತು ವಿಶೇಷ ಠರಾವಿನ ನಕಲುಗಳನ್ನು ಮತ್ತು ನಿರ್ದೇಶಕರ ದಾಖಲೆ ಪುಸ್ತಕದ ನಕಲು ಮತ್ತು ಯಾವುದಾದರೂ ಅಧಿಸೂಚನೆಗಳಿದ್ದರೆ ಅವುಗಳನ್ನು ಕಳುಹಿಸಿಕೊಡತಕ್ಕದ್ದು.

ನಿರ್ದೇಶಕರ ಸಮಿತಿಯು ಅವರ ಹೆಸರನ್ನು ಸಹಿಮಾಡಲೆಂದೇ ನಿರ್ವಹಿಸುವ ಪುಸ್ತಕದಲ್ಲಿ ಸಹಿ ಮಾಡತಕ್ಕದ್ದು.

74(ಎ). ಅಧ್ಯಕ್ಷರ/ಸಭಾಧ್ಯಕ್ಷರ ಮತ್ತು ಪ್ರಧಾನ ಕಾರ್ಯನಿರ್ವಾಹಕ ಮತ್ತು ಅರೆಕಾಲಿಕ ಅಧಿಕಾರಿಗಳ ಮತ್ತು ಅನಧಿಕೃತ ನಿರ್ದೇಶಕರುಗಳ ಪಾತ್ರ ಮತ್ತು ಅವರ ಜವಾಬ್ದಾರಿಗಳು ಮತ್ತು ಕಾರ್ಯಗಳು.

(1) ಅಧ್ಯಕ್ಷರು ಮಂಡಳಿಯ ಸಭೆಗಳಿಗೆ ಅಧ್ಯಕ್ಷತೆಯನ್ನು ವಹಿಸುವುದು ಮತ್ತು ಕಂಪನಿಯ ಉಳಿಕೆ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಗಳು ಮತ್ತು ಜವಾಬ್ದಾರಿಗಳು ಮತ್ತು ಕಾರ್ಯಗಳನ್ನು ಪ್ರಧಾನ ಕಾರ್ಯನಿರ್ವಾಹಕ ಅಧಿಕಾರಿ/ ವ್ಯವಸ್ಥಾಪಕ ನಿರ್ದೇಶಕರು ನಿರ್ವಹಿಸುವರು.

(2) ಮಂಡಳಿಯು ಕಂಪನಿಯ ಎಲ್ಲಾ ವಿಚಾರಗಳನ್ನು ನಿರ್ವಹಿಸುವುದು ಮತ್ತು ಎಲ್ಲಾ ಪ್ರಸ್ತಾಪಗಳಿಗೂ ಸರ್ಕಾರದ ಅನುಮೋದನೆಯನ್ನು ಪಡೆಯುವುದು ಮತ್ತು ಉಳಿದ ಎಲ್ಲಾ ಕಾರ್ಯನಿರ್ವಾಹಕ ಕಾರ್ಯಗಳನ್ನು ಮತ್ತು ತೀರ್ಮಾನಗಳನ್ನು ಪ್ರಧಾನ ಕಾರ್ಯ ನಿರ್ವಾಹಕ ಅಧಿಕಾರಿಗಳು, ವ್ಯವಸ್ಥಾಪಕ ನಿರ್ದೇಶಕರು ನಿರ್ವಹಿಸುವರು.

(3) ಮಂಡಳಿಯ ಉಪ ಸಮಿತಿಗಳನ್ನು ರಚಿಸುವುದು ಮತ್ತು ಮಂಡಳಿಯ ಪರವಾಗಿ ಅವುಗಳು ಕಾರ್ಯನಿರ್ವಹಿಸುವುದೇ ಹೊರತು ಯಾವುದೇ ಕಾರ್ಯನಿರ್ವಾಹಕ ಕೆಲಸ ಕಾರ್ಯಗಳನ್ನು ನಿರ್ವಹಿಸುವಂತಿಲ್ಲ.

(4) ಅರೆಕಾಲಿಕ ನಿರ್ದೇಶಕರು (ಅನಧಿಕೃತ ನಿರ್ದೇಶಕರು) ಮಂಡಳಿಯ ಸಭೆಗಳನ್ನು ಹಾಜರಾಗಬಹುದು ಮತ್ತು ಕಂಪನಿಯ ಕಾರ್ಯನಿರ್ವಾಹಕ ಕೆಲಸ ಕಾರ್ಯಗಳ ವಿಷಯದಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ. ಅರೆಕಾಲಿಕ ನಿರ್ದೇಶಕರು ಮಂಡಳಿಯ ಸಭೆಗಳಿಗಾಗಿ (ಅನಧಿಕೃತ ನಿರ್ದೇಶಕರು) ಪ್ರಯಾಣ ಭತ್ಯ ಮತ್ತು ಭತ್ಯಗಳಿಗೆ ಮತ್ತು ಆಸೀನರಾಗುವ ಶುಲ್ಕಗಳಿಗೆ ಮಾತ್ರ ಅರ್ಹರಾಗಿರುತ್ತಾರೆ. ಅವರು ಇತರೇ ಯಾವುದೇ ವಿಧವಾದ ಭತ್ಯಗಳು ಅಥವಾ ಸೌಲಭ್ಯಗಳು ಅಂದರೆ ತಂಗಲು ಬೇಕಾದ ಅನುಕೂಲತೆ, ದೂರವಾಣಿ, ಕಾರುಗಳು, ಲೇಖನ ಸಾಮಗ್ರಿ, ಭೇಟಿ ಕಾರ್ಡುಗಳು, ಇತ್ಯಾದಿ ಸವಲತ್ತುಗಳನ್ನು ಪಡೆಯಲು ಅರ್ಹರಲ್ಲ.

(5) ಮಂಡಳಿಯ ಸಭೆಗಳು ಮೂರು ತಿಂಗಳಿಗೊಮ್ಮೆ ನಡೆಸತಕ್ಕದ್ದು. ಅದಾಗಿ, ಅಸಾಧಾರಣಾ ಪರಿಸ್ಥಿತಿಗಳಲ್ಲಿ ವ್ಯವಹಾರದ ಅಗತ್ಯತೆಗೆ ತಕ್ಕಂತೆ ಒಂದು ವರ್ಷದಲ್ಲಿ ಆರು ಸಭೆಗಳನ್ನು ನಡೆಸತಕ್ಕದ್ದು ಆದರೆ ಒಂದು ತಿಂಗಳಲ್ಲಿ ಎರಡು ಸಭೆಗಳನ್ನು ನಡೆಸುವಂತಿಲ್ಲ. ಮಂಡಳಿ ಸಭೆಯ ದಿನಾಂಕಗಳನ್ನು ಅಧ್ಯಕ್ಷರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ಮತ್ತು ವ್ಯವಸ್ಥಾಪಕ ನಿರ್ದೇಶಕರು ನಿರ್ಧರಿಸುವರು.

(6) ಸರ್ಕಾರದ ವಿವಿಧ ಆದೇಶಗಳು, ಸುತ್ತೋಲೆಗಳು, ಇತ್ಯಾದಿಗಳಲ್ಲಿ ಕಂಡ ಸೂಚನೆಗಳನ್ನು ಕಂಪನಿಯ ಪ್ರಧಾನ ಕಾರ್ಯನಿರ್ವಾಹಕರೊಬ್ಬರೇ ಜಾರಿಗೆ ತರಲು ಜವಾಬ್ದಾರರಾಗಿರುತ್ತಾರೆ. ಸರ್ಕಾರದ ಅನುಮೋದನೆಗಾಗಿ ಬಾಕಿ ಇರುವ ವಿಷಯಗಳ ಬಗ್ಗೆ ಯಾವುದೇ ಸಂದರ್ಭದಲ್ಲಿ ಸಹಾ ಸರ್ಕಾರದ ಅನುಮೋದನೆ ಇಲ್ಲದೇ ಪ್ರಧಾನ ಕಾರ್ಯನಿರ್ವಾಹಕ ಅಧಿಕಾರಿಗಳು ಕಾರ್ಯೋನ್ಮುಖರಾಗಬಾರದು.

(7) ಸರ್ಕಾರದ ಸುತ್ತೋಲೆಗಳಲ್ಲಿ ಕಂಡಂತೆ ಮತ್ತು ಮಾರ್ಗಸೂಚಿ ಪ್ರಕಾರ ನಡೆದುಕೊಳ್ಳುವ ವೈಯಕ್ತಿಕ ಜವಾಬ್ದಾರಿಯು ಪ್ರಧಾನ ಕಾರ್ಯನಿರ್ವಾಹಕ ಅಧಿಕಾರಿಗಳದ್ದಾಗಿರುತ್ತೆ.

(8) ಅಧ್ಯಕ್ಷರ / ಸಭಾಧ್ಯಕ್ಷರ ಮತ್ತು ಅರೆಕಾಲಿಕ ನಿರ್ದೇಶಕರ (ಅನಧಿಕೃತ ನಿರ್ದೇಶಕರುಗಳ) ಪಾತ್ರ, ಕಾರ್ಯಗಳು ಮತ್ತು ಜವಾಬ್ದಾರಿಗಳಿಗೆ ಪ್ರಧಾನ ಕಾರ್ಯನಿರ್ವಾಹಕ ಅಧಿಕಾರಿಗಳದ್ದೇ ಆಗಿರುತ್ತೆ.

(9) ಕಂಪನಿಯ ಆರ್ಥಿಕ ವ್ಯವಸ್ಥೆ ಮತ್ತು ವ್ಯವಹಾರಗಳಿಗೆ ವ್ಯತಿರಿಕ್ತವಾದ ತೀರ್ಮಾನಗಳನ್ನು ಮಂಡಳಿಯು ತೆಗೆದುಕೊಂಡಾಗ ಅವುಗಳನ್ನು ಮತ್ತು ಸರ್ಕಾರದ ಅಧಿಸೂಚನೆಗಳು, ಸುತ್ತೋಲೆಗಳು ಮತ್ತು

ಮಾರ್ಗಸೂಚಿಗಳಿಗೆ ವಿರುದ್ಧವಾಗಿದ್ದಾಗ ಪ್ರಧಾನ ಕಾರ್ಯನಿರ್ವಾಹಕ ಅಧಿಕಾರಿಗಳು ಜಾರಿಗೆ ತರುವ ಅಗತ್ಯವಿರುವುದಿಲ್ಲ. ಪ್ರಧಾನ ಕಾರ್ಯನಿರ್ವಾಹಕ ಅಧಿಕಾರಿಗಳು ಆತ/ಆಕೆಯ ಸಮಾಧಾನವನ್ನು ಮಿನಿಟ್ಸ್ ಬುಕ್‌ನಲ್ಲಿ ಸಭೆಯ ಮಿನಿಟ್ಸ್ ಬಗ್ಗೆ ತಮ್ಮ ಅಸಮಾಧಾನವನ್ನು ವಿವರಗಳೊಂದಿಗೆ ದಾಖಲಿಸುವುದು ಮತ್ತು ಸರ್ಕಾರದ ಉಲ್ಲೇಖಗಳೊಂದಿಗೆ ಮತ್ತು ಅದರ ಆದೇಶಗಳ ಉಲ್ಲೇಖದೊಂದಿಗೆ ಪರಿಸ್ಥಿತಿಗಳ ಬಗ್ಗೆ ವಿವರಣೆಯನ್ನು ನೀಡುತ್ತಾ ದಾಖಲಿಸುವುದು.

**ಮೊಹರು [ಸೀಲ್]**

75. ಕಂಪನಿಯ ಮೊಹರನ್ನು ನಿರ್ದೇಶಕರ ಮಂಡಳಿಯ ಠರಾವಿನಂತೆ ಮಾತ್ರ ಮುದ್ರೆಯನ್ನು ಹಾಕಬೇಕೆ ಹೊರತು ಯಾವುದೇ ದಾಖಲಾತಿಗಳಿಗೆ ಮುದ್ರೆ ಒತ್ತುವಂತಿಲ್ಲ ಮತ್ತು ಅದನ್ನು ಸಹಾ ಕನಿಷ್ಟ ಒಬ್ಬ ನಿರ್ದೇಶಕರ ಅಥವಾ ಇತರೇ ವ್ಯಕ್ತಿ ಸರ್ಕಾರದಿಂದ ಅಥವಾ ನಿರ್ದೇಶಕರಿಂದ ಇದೇ ಕೆಲಸಕ್ಕಾಗಿ ನೇಮಿಸಲ್ಪಟವರ ಸಮುಖದಲ್ಲಿ ಮಾತ್ರ ಮುದ್ರೆ ಹಾಕಬೇಕು; ಮತ್ತು ಯಾವುದೇ ನಿರ್ದೇಶಕರು ಅಥವಾ ಮೇಲ್ಕಂಡಂತೆ ಇತರೇ ಅಧಿಕೃತ ವ್ಯಕ್ತಿಯು ತನ್ನ ಸಮ್ಮುಖದಲ್ಲಿ ಕಂಪನಿಯ ಮುದ್ರೆಯನ್ನು ಹಾಕಿದ ಪ್ರತಿಯೊಂದು ದಾಖಲಾತಿಗೂ ಸಹಿಯನ್ನು ಮಾಡತಕ್ಕದ್ದು.

**ನಿರ್ದೇಶಕರ ಅನರ್ಹತೆ**

76. ಕಾಯಿದೆಯ ಕಲಂ 164 ರ ನಿಬಂಧನೆಗಳ ಪ್ರಕಾರ ಕಂಪನಿಯ ನಿರ್ದೇಶಕರೆಂದು ನೇಮಕಮಾಡಲು ಅರ್ಹರಲ್ಲ ವೆಂಬುದಾದರೆ –

(ಎ) ಕಾನೂನಿನ ವ್ಯಾಪ್ತಿಗೆ ಒಳಪಡುವ ಮಾನ್ಯ ನ್ಯಾಯಾಲಯದಿಂದ ಆತನು ಬುದ್ಧಿ ಮಾಂದ್ಯನೆಂದು ತೀರ್ಮಾನಿಸಿದಾಗ;

(ಏ) ಆತನು ಸಾಲವನ್ನು ಮರುಪಾವತಿಸದ ದಿವಾಳಿಯಾಗಿದ್ದರೆ;

(ಐ) ಆತನು ತನ್ನನ್ನು ದಿವಾಳಿಯೆಂದು ಪರಿಗಣಿಸಬೇಕೆಂದು ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿಯು ತೀರ್ಮಾನಕ್ಕಾಗಿ ಬಾಕಿ ಇದ್ದಲ್ಲಿ;

(ಒ) ಆತನು ತಾನು ಮಾಡಿದ ತಪ್ಪಿಗಾಗಿ ನ್ಯಾಯಾಲಯದಿಂದ ತಪ್ಪಿತಸ್ಥನೆಂದು ತೀರ್ಮಾನವಾಗಿ ಆತನು ಯಾವುದೇ ನೀಚತನದ ಕೆಲಸದಲ್ಲಿ ತೊಡಗಿಸಿಕೊಂಡಿದ್ದರೆ, ಇತ್ಯಾದಿ ಮತ್ತು ಈ ವಿಷಯದಲ್ಲಿ ಆರು ತಿಂಗಳಿಗೆ ಕಡಿಮೆ ಇಲ್ಲದಂತೆ ಜೈಲು ಶಿಕ್ಷೆಗೆ ಒಳಪಟ್ಟಿದ್ದು, ಆತನ ಸದರಿ ಶಿಕ್ಷೆ ಕಳೆದು ಐದು ವರ್ಷಗಳ ಅವಧಿ ಮುಗಿಯದೇ ಇದ್ದಲ್ಲಿ;

ಅದಾಗಿ, ಯಾವುದೇ ವ್ಯಕ್ತಿಯು ಯಾವುದೇ ತಪ್ಪನ್ನು ಮಾಡಿ ಮತ್ತು ಸದರಿ ತಪ್ಪಿಗಾಗಿ ಏಳು ವರ್ಷಗಳು ಮತ್ತು ಅದಕ್ಕಿಂತ ಹೆಚ್ಚು ಅವಧಿಗೆ ಶಿಕ್ಷೆಗೆ ಒಳಪಟ್ಟಿದ್ದಲ್ಲಿ ಆತನು ನಿರ್ದೇಶಕನಾಗಿ ನೇಮಕಗೊಳ್ಳಲು ಅನರ್ಹನಾಗಿರುತ್ತಾನೆ.

(ಓ) ಮಾನ್ಯ ನ್ಯಾಯಾಲಯವಾಗಲೀ ಅಥವಾ ನ್ಯಾಯಾಧಿಕರಣವಾಗಲೀ ಆತನನ್ನು ನಿರ್ದೇಶಕರನ್ನಾಗಿ ನೇಮಕಮಾಡಲು ಅನರ್ಹಗೊಳಿಸಿ ಆದೇಶವನ್ನು ನೀಡಿ ಸದರಿ ಆದೇಶವು ಜಾರಿಯಲ್ಲಿದ್ದರೆ;

(ಔ) ಆತನು ನಿರ್ದೇಶಕರ ಗುರ್ತಿನ ಸಂಖ್ಯೆಯನ್ನು ಪಡೆಯದೇ ಇದ್ದಲ್ಲಿ;

(ಕ) *ಆತನು ಅಥವಾ ಯಾವುದೇ ಸಂಸ್ಥೆಯಲ್ಲಿ ಭಾಗಸ್ಥನಾಗಿದ್ದರೆ ಅಥವಾ ಆತನು ಯಾವುದೇ ಖಾಸಗಿ ಕಂಪನಿಗೆ ನಿರ್ದೇಶಕನಾಗಿದ್ದು ಕಾಲ್ ಮೊಬಲಗನ್ನು [ಪಾವತಿ ಮಾಡಬೇಕಾದ ಮೊಬಲಗನ್ನು] ಅಂದರೆ ಆತನು ಹೊಂದಿರುವ ಷೇರುಗಳಿಗೆ ಹಣ ಪಾವತಿ ಮಾಡಲು ವಿಫಲನಾದಲ್ಲಿ, ಸಂಸ್ಥೆಯಾಗಲೀ* ಅಥವಾ ಖಾಸಗಿ ಕಂಪನಿಯಾಗಲೀ ಆತನಿಗೆ ಕಾಲ್ ಮೊಬಲಗನ್ನು ಪಾವತಿಸುವಂತೆ ತಿಳಿಸಿದ ದಿನಾಂಕದಿಂದ ಆರು ತಿಂಗಳೊಳಗೆ; ಅಥವಾ

(ಕಿ) ಆತನು ಅಥವಾ ಯಾವುದೇ ಸಂಸ್ಥೆಯಲ್ಲಿ ಭಾಗಸ್ಥನಾಗಿದ್ದರೆ ಅಥವಾ ಆತನು ಯಾವುದೇ ಖಾಸಗಿ ಕಂಪನಿಗೆ ನಿರ್ದೇಶಕನಾಗಿದ್ದು, ಕಂಪನಿಯ ಸರ್ವ ಸದಸ್ಯರ ಸಭೆಯಲ್ಲಿ ಮಂಜೂರಾತಿ ಆಗದೇ ಕಂಪನಿಯಲ್ಲಿ ವ್ಯವಸ್ಥಾಪಕ ನಿರ್ದೇಶಕರು ಅಥವಾ ವ್ಯವಸ್ಥಾಪಕರು ಅಥವಾ ಕಾನೂನು ಅಥವಾ ತಾಂತ್ರಿಕ ಸಲಹೆಗಾರರು ಅಥವಾ ಬ್ಯಾಂಕರ್ ಹುದ್ದೆಯನ್ನು ಹೊರತುಪಡಿಸಿ ಯಾವುದೇ ಹುದ್ದೆಯನ್ನು ಹೊಂದಿದ್ದರೆ; ಅಥವಾ

(ಖ) ಯಾವುದೇ ಸಾಲವನ್ನು ಅಥವಾ ಜಾಮೀನನ್ನು ಅಥವಾ ಭದ್ರತೆಯನ್ನು ಆತನು ತನ್ನ ಸಾಲಕ್ಕಾಗಿ ಕಂಪನಿಯಿಂದ ಪಡೆದಲ್ಲಿ; ಅಥವಾ

(ಖ) ಕಂಪನಿಯೊಂದಿಗೆ ಮಾಡಿಕೊಂಡ ಒಪ್ಪಂದಗಳಲ್ಲಿ ಆತನಿಗೆ ಪಾಲಿದ್ದರೆ ಅಥವಾ ಆತನಿಗೆ ಸಂಬಂಧವಿದ್ದರೆ; ಅಥವಾ

(ಖಿ) ಆತನು ಆರು ತಿಂಗಳ ಅವಧಿಗಿಂತಲೂ ಹೆಚ್ಚು ಕಾಲ ಜೈಲು ಶಿಕ್ಷೆಯನ್ನು ಅನುಭವಿಸಿದ್ದರೆ, ಆದರೆ, ಅದಾಗಿ ಯಾವುದೇ ನಿರ್ದೇಶಕರು ಕಂಪನಿಯು ಯಾವುದೇ ಕಂಪನಿಯೊಂದಿಗೆ ಕರಾರು ಮಾಡಿಕೊಂಡು ಯಾವುದೇ ಕೆಲಸವನ್ನು ಮಾಡಿಸಿದ್ದೇ ಆದರೆ, ಸದರಿ ಕಂಪನಿಯ ನಿರ್ದೇಶಕರಾಗಿದ್ದರೆ ಆ ಕಾರಣಕ್ಕಾಗಿ ಸದರಿ ನಿರ್ದೇಶಕರು ತನ್ನ ಸ್ಥಾನವನ್ನು ತೆರವುಗೊಳಿಸುವ ಅಗತ್ಯವಿಲ್ಲ, ಆದರೆ ಆತನು ನಿರ್ದೇಶಕನಾಗಿರುವ ಈ ಕಂಪನಿಯು ಸದರಿ ಕಂಪನಿಗೆ ಗುತ್ತಿಗೆ

ನೀಡುವ ವಿಚಾರದಲ್ಲಿ ಮತವನ್ನು ಚಲಾಯಿಸುವಂತಿಲ್ಲ, ಅಕಸ್ಮಾತ್ ಆತನು ಮತ ಚಲಾಯಿಸಿದರೆ ಆತನ ಮತವನ್ನು ಪರಿಗಣಿಸುವಂತಿಲ್ಲ.

**<u>ನಿರ್ದೇಶಕರ ನಡಾವಳಿಗಳು</u>**

77. (1) ನಿರ್ದೇಶಕರ ಮಂಡಳಿಯು ಮುಂದುವರೆದ ಸಭೆಗೆ ಹಾಜರಾಗುವುದು ಮತ್ತು ಅವರ ವಿವೇಚನೆಗೆ ಅನುಸಾರವಾಗಿ ಸದರಿ ಸಭೆಯನ್ನು ಕ್ರಮಬದ್ಧಗೊಳಿಸುವುದು.

(2) ನಿರ್ದೇಶಕರು ಮತ್ತು ವ್ಯವಸ್ಥಾಪಕರು ಅಥವಾ ಕಾರ್ಯದರ್ಶಿಗಳು ಯಾವುದೇ ಒಬ್ಬ ನಿರ್ದೇಶಕರು ಸಭೆಯನ್ನು ಕರೆಯಲು ಬೇಡಿಕೆಯಿಟ್ಟಾಗ ಯಾವುದೇ ಸಮಯದಲ್ಲಾಗಲೀ ಮಂಡಳಿಯ ಸಭೆಯನ್ನು ಕರೆಯುವುದು.

(3) ಮೇಲ್ಕಂಡಂತೆ ಅಥವಾ ಕಾಯಿದೆಯಲ್ಲಿ ತಿಳಿಸಿದಂತೆ ಯಾವುದೇ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಪ್ರಶ್ನೆಗಳು ಉದ್ಭವಿಸಿದಲ್ಲಿ ಅದನ್ನು ಬಹುಮತದ ಮತಗಳಿಂದ ವಿಷಯವನ್ನು ತೀರ್ಮಾನಿಸುವುದು.

(4) ಅಕಸ್ಮಾತ್ ವಿಷಯದ ಬಗ್ಗೆ ಸಮ ಮತಗಳು ಬಂದಲ್ಲಿ ಮಂಡಳಿಯ ಅಧ್ಯಕ್ಷರು ತಮ್ಮ ಎರಡನೇ ಮತವನ್ನು ಚಲಾಯಿಸಿ ವಿಷಯವನ್ನು ಇತ್ಯರ್ಥಗೊಳಿಸುವುದು.

78. ಮೇಲ್ಕಂಡಂತೆ ಅಥವಾ ಕಾಯಿದೆಯಲ್ಲಿ ತಿಳಿಸಿದಂತೆ ಎಲ್ಲಾ ನಿರ್ದೇಶಕರ ಮಂಡಳಿಯ ಎಲ್ಲಾ ಸದಸ್ಯರು ಲಿಖಿತದಲ್ಲಿರುವ ಠರಾವಿಗೆ ಸಹಿಮಾಡುವುದು ಅಥವಾ ಭಾರತ ದೇಶದಲ್ಲಿರುವ ನಿರ್ದೇಶಕರ ಸಮಿತಿಯ ಎಲ್ಲಾ ಸದಸ್ಯರು ಸಹಿ ಮಾಡತಕ್ಕದ್ದು ಅದು ಊರ್ಜಿತವು ಮತ್ತು ಅದು ಎಲ್ಲಾ ನಿರ್ದೇಶಕರು ಸಭೆಯಲ್ಲಿ ಹಾಜರಿದ್ದು ಸಹಿಮಾಡಿದಂತೆ ಅಥವಾ ನಿರ್ದೇಶಕರ ಸಮಿತಯ ಸದಸ್ಯರನ್ನು ಕರೆದು ಸಹಿ ಮಾಡಿಸತಕ್ಕದ್ದು, ಆದರೆ ಸದರಿ ಠರಾವನ್ನು ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯಿಂದ ನಾಮನಿರ್ದೇಶಿತರಾದ ಒಬ್ಬ ನಿರ್ದೇಶಕರು ಅಥವಾ ಆರ್ಥಿಕ ಇಲಾಖೆಯಿಂದ ನಾಮನಿರ್ದೇಶಿತರಾದ ಒಬ್ಬ ನಿರ್ದೇಶಕರು ಸಹಿ ಮಾಡತಕ್ಕದ್ದು.

79. ಮಂಡಳಿಯು ಯಾವುದೇ ವ್ಯವಹಾರವನ್ನು ನಡೆಸಬೇಕಾದಲ್ಲಿ ಕಾಯಿದೆಯ ಕಲಂ 174ರ ನಿಯಮಾವಳಿಗಳ ಪ್ರಕಾರ ಇರತಕ್ಕದ್ದು ಮತ್ತು ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯಿಂದ ನಾಮನಿರ್ದೇಶಿತರಾದ ಒಬ್ಬ ನಿರ್ದೇಶಕರು ಅಥವಾ ಆರ್ಥಿಕ ಇಲಾಖೆಯಿಂದ ನಾಮನಿರ್ದೇಶಿತರಾದ ಒಬ್ಬ ನಿರ್ದೇಶಕರು ಸಹಿ ಮಾಡತಕ್ಕದ್ದು.

80. ಮಂಡಳಿಯಲ್ಲಿ ಯಾವುದೇ ಹುದ್ದೆ ತೆರವಾಗಿದ್ದರೂ ಸಹಾ ಮುಂದುವರೆಯುವ ನಿರ್ದೇಶಕರು ಮಂಡಳಿಯ ಸದಸ್ಯರಾಗಿ ಮುಂದುವರೆಯತಕ್ಕದ್ದು, ಒಂದುವೇಳೆ ಸುದೀರ್ಘಕಾಲದಿಂದ ಸದರಿ ಸಂಖ್ಯೆಯನ್ನು ನಿಗದಿತ ಸಂಖ್ಯೆಗಿಂತಲೂ ಕಡಿಮೆ ಸಂಖ್ಯೆಗೆ ಕಡಿಮೆಗೊಳಿಸಿದರೆ ಅಥವಾ ಈ ಜ್ಞಾಪನಾ ಪತ್ರದಲ್ಲಿ ಕಂಡ ಅಗತ್ಯವಾದ ನಿರ್ದೇಶಕರ ಸಂಖ್ಯೆ ಅಗತ್ಯವಾದ ಕನಿಷ್ಟ ಸಂಖ್ಯೆಯಾಗಿರುತ್ತದೆ; ಸರ್ವ ಸದಸ್ಯರ ಸಭೆಯನ್ನು ನಡೆಸುವಂತೆ ಕರೆಯ ಬಹುದು; ಆದರೆ ಇತರೇ ಉದ್ದೇಶಗಳಿಗಲ್ಲ.

81. ನಿರ್ದೇಶಕರ ಮಂಡಳಿಗೆ ಸರ್ಕಾರವು ಕಾಲ ಕಾಲಕ್ಕೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ನೇಮಕ ಮಾಡತಕ್ಕದ್ದು ಮತ್ತು ಅವರವರ ಹುದ್ದೆಯಲ್ಲಿ ಅವರ ಎಷ್ಟು ಅವಧಿಗೆ ಇರಬೇಕೆಂಬುದನ್ನು ಸಹಾ ಸರ್ಕಾರವೇ ನಿರ್ಧರಿಸುತ್ತದೆ. ಈ ವಿಧವಾಗಿ ನೇಮಕಗೊಂಡ ಅಧ್ಯಕ್ಷರು ಯಾವುದೇ ಸಭೆಗೆ ಸಭೆ ಪ್ರಾರಂಭಿಸಲು ನಿಗದಿಪಡಿಸಿದ ಸಮಯದಿಂದ ಹತ್ತು ನಿಮಿಷಗಳು ಕಳೆದರೂ ಹಾಜರಾಗದಿದ್ದರೆ, ಸದರಿ ಸಭೆಯ ಅಧ್ಯಕ್ಷತೆಯನ್ನು ಉಪಾಧ್ಯಕ್ಷರು ವಹಿಸತಕ್ಕದ್ದು. ಈ ವಿಧವಾಗಿ ನೇಮಕಗೊಂಡ ಉಪಾಧ್ಯಕ್ಷರು ಯಾವುದೇ ಸಭೆಗೆ ಸಭೆ ಪ್ರಾರಂಭಿಸಲು ನಿಗದಿಪಡಿಸಿದ ಸಮಯದಿಂದ ಹತ್ತು ನಿಮಿಷಗಳು ಕಳೆದರೂ ಹಾಜರಾಗದಿದ್ದರೆ, ಸದರಿ ಸಭೆಯಲ್ಲಿ ಹಾಜರಿರುವ ನಿರ್ದೇಶಕರ ತಮ್ಮಲ್ಲೇ ಒಬ್ಬರನ್ನು ಅಧ್ಯಕ್ಷರನ್ನಾಗಿ ಆಯ್ಕೆಮಾಡಿಕೊಂಡು ಸಭೆಯನ್ನು ನಡೆಸತಕ್ಕದ್ದು.

82. ನಿರ್ದೇಶಕರು ತಮ್ಮ ವಿವೇಚನೆಯಂತೆ ತಮ್ಮ ಅಧಿಕಾರವನ್ನು ತಮ್ಮ ಮಂಡಳಿಯ ಸದಸ್ಯರನ್ನೇ ಹೊಂದಿರುವ ಸಮಿತಿ ಸದಸ್ಯರಿಗೆ ಕಾಯಿದೆಯ ನಿಯಮಾವಳಿಗಳ ಅನುಸಾರವಾಗಿ ವರ್ಗಾವಣೆ ಮಾಡತಕ್ಕದ್ದು.

೮೩. ಸಮಿತಿಯು ತನ್ನ ಸಭೆಗೆ ಅಧ್ಯಕ್ಷರನ್ನು ಆಯ್ಕೆಮಾಡಿಕೊಳ್ಳತಕ್ಕದ್ದು; ಆ ವಿಧವಾಗಿ ಅಧ್ಯಕ್ಷರನ್ನು ನೇಮಕ ಮಾಡದೇ ಹೋದಪಕ್ಷದಲ್ಲಿ ಅಥವಾ ಈ ವಿಧವಾಗಿ ನೇಮಕಗೊಂಡ ಅಧ್ಯಕ್ಷರು ಯಾವುದೇ ಸಭೆಗೆ ಸಭೆ ಪ್ರಾರಂಭಿಸಲು ನಿಗದಿಪಡಿಸಿದ ಸಮಯದಿಂದ ಹತ್ತು ನಿಮಿಷಗಳು ಕಳೆದರೂ ಹಾಜರಾಗದಿದ್ದರೆ, ಸದರಿ ಸಭೆಯಲ್ಲಿ ಹಾಜರಿರುವ ಸದಸ್ಯರು ತಮ್ಮಲ್ಲೇ ಒಬ್ಬರನ್ನು ಅಧ್ಯಕ್ಷರನ್ನಾಗಿ ಆಯ್ಕೆಮಾಡಿಕೊಂಡು ಸಭೆಯನ್ನು ನಡೆಸತಕ್ಕದ್ದು.

೮೪. ಸಮಿತಿಯು ತನ್ನ ಸಭೆಗಳನ್ನು ತನ್ನ ವಿವೇಚನೆಯಂತೆ ನಡೆಸಬಹುದು ಮತ್ತು ಅದನ್ನು ಮುಂದೂಡಬಹುದು. ಯಾವುದೇ ಸಭೆಯಲ್ಲಿ ಒಂದು ವಿಷಯದ ಬಗ್ಗೆ ಪ್ರಶ್ನೆ ಉದ್ಭವಿಸಿದಲ್ಲಿ ಸದರಿ ವಿಷಯವನ್ನು ಸದರಿ ಸಭೆಯಲ್ಲಿ ಹಾಜರಿರುವ ಸದಸ್ಯರ ಬಹುಮತದಿಂದ ನಿರ್ಧರಿಸಲಾಗುವುದು. ಅಕಸ್ಮಾತ್ ವಿಷಯದ ಬಗ್ಗೆ ಸಮ ಮತಗಳು ಬಂದಲ್ಲಿ ಸದರಿ ಸಭೆಯ ಅಧ್ಯಕ್ಷರ ತಮ್ಮ ಎರಡನೇ ಮತವನ್ನು ಚಲಾಯಿಸಿ ವಿಷಯವನ್ನು ತೀರ್ಮಾನಿಸುವುದು.

೮೫. ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ವಹಿಸಿದ ಎಲ್ಲಾ ಕಾರ್ಯಗಳು ಅಥವಾ ನಿರ್ದೇಶಕರ ಸಮಿತಿಯಲ್ಲಿ ನಿರ್ವಹಿಸಿದ ಎಲ್ಲಾ ಕಾರ್ಯಗಳು ಅಥವಾ ಯಾವುದೇ ವ್ಯಕ್ತಿ ನಿರ್ದೇಶಕರಂತೆ ಕಾರ್ಯನಿರ್ವಹಿಸಿ, ತದನಂತರ ಸದರಿ ನೇಮಕಾತಿಯಲ್ಲಿ ಅಂದರೆ ನಿರ್ದೇಶಕರ ಅಥವಾ ವ್ಯಕ್ತಿಯ ನೇಮಕಾತಿಯಲ್ಲಿ ತಪ್ಪು ಉಂಟಾಗಿದೆಯೆಂದು ಅಥವಾ ಅವರಲ್ಲಿ ಕೆಲವರು ಅನರ್ಹರೆಂದು ಕಂಡುಬಂದಲ್ಲಿ, ಅವರನ್ನು ಸದರಿ ನಿರ್ದೇಶಕರನ್ನಾಗಿ ನೇಮಕ ಮಾಡಿದ ನಂತರ ಅವರು ನಿರ್ದೇಶಕರಾಗಲು ಅರ್ಹರೆಂದು ಪರಿಗಣಿಸಲಾಗುವುದು.

೮೬. (1) ಈ ಕೆಳಕಂಡ ವಿಷಯಗಳಲ್ಲಿ ಮಂಡಳಿಯ ಯಾವುದೇ ಪ್ರಸ್ತಾಪ ಅಥವಾ ನಿರ್ಣಯವನ್ನು ತೆಗೆದುಕೊಳ್ಳುವ ಮುನ್ನ ಅಧ್ಯಕ್ಷರು ಸರ್ಕಾರದ ಅನುಮೋದನೆಗಾಗಿ ಕಾಯ್ದಿರಿಸತಕ್ಕದ್ದು :

(ಎ) ಕಂಪನಿಯ ಕೊಡಲಾದ ಮೂಲಧನವನ್ನು ಹೆಚ್ಚಿಸಲು ಅಥವಾ ಕಡಿಮೆ ಮಾಡಲು;

(ಐ) ಕಂಪನಿಯು ಯಾವುದೇ ಸಾಲವನ್ನು ಮಂಜೂರು ಮಾಡುವುದು ಅಥವಾ ಜಾಮೀನು ನೀಡುವುದು ಅಥವಾ ಯಾವುದೇ ವಿಧವಾದ ಆರ್ಥಿಕ ಸಹಾಯವನ್ನು ಯಾರಿಗಾದರೂ ಮಾಡದರೆ ಮತ್ತು ಸದರಿ ಹಣ ರೂ.2.50 ಕೋಟಿಗಳಿಗಿಂತಲೂ ಮೇಲ್ಪಟ್ಟಿದ್ದರೆ;

(ಔ) ಕಂಪನಿಯನ್ನು ಮುಚ್ಚಲು;

(ಕ) ಕಂಪನಿಯ ಅಂಗ ಸಂಸ್ಥೆಯನ್ನು ರಚಿಸುವಾಗ;

(ಕ) ಮತ್ತು ಇತರೇ ಯಾವುದೇ ವಿಷಯವು ಅಧ್ಯಕ್ಷರ ಅಭಿಪ್ರಾಯದಂತೆ ಅತ್ಯಂತ ಪ್ರಾಮುಖ್ಯವೆಂದು ಕಂಡು ಬಂದಲ್ಲಿ ಅದನ್ನು ಸರ್ಕಾರದ ಅನುಮೋದನೆಗಾಗಿ ಕಾಯ್ದಿರಿಸತಕ್ಕದ್ದು.

(2) ಈ ಕೆಳಕಂಡ ವಿಷಯಗಳಲ್ಲಿ ಸಹಾ ನಿರ್ದೇಶಕರ ಯಾವುದೇ ಪ್ರಸ್ತಾಪ ಅಥವಾ ನಿರ್ಣಯವನ್ನು ತೆಗೆದುಕೊಳ್ಳುವ ಮುನ್ನ ಅಧ್ಯಕ್ಷರು ಸರ್ಕಾರದ ಅನುಮೋದನೆಗಾಗಿ ಕಾಯ್ದಿರಿಸತಕ್ಕದ್ದು :

(ಕಿ) ಭೋಗ್ಯಕ್ಕೆ ನೀಡುವುದು ಅಥವಾ ಇನ್ಯಾವುದೇ ವಿಧದಲ್ಲಿ ಕಂಪನಿಯ ಉದ್ಯಮೆಗಳನ್ನು ವಿಲೇವಾರಿ ಮಾಡುವುದು;

(ಖ) ಪ್ರಧಾನ ವ್ಯವಸ್ಥಾಪಕರು, ಮೇಲ್ವಿಚಾರಣಾ ಅಭಿಯಂತರರು [ಸೂಪರಿಂಟೆಂಡಿಗ್ ಇಂಜಿನಿಯರ್] ಹುದ್ದೆಗಳಿಗೆ ಸಮನಾದ ಅಥವಾ ಮೇಲ್ಪಟ್ಟ ಹುದ್ದೆಗಳಿಗೆ ಸಂಸ್ಥೆಗೆ ನೇಮಕ ಮಾಡಿಕೊಳ್ಳುವಾಗ.

(ಖಿ) ರೂ.150.00 ಕೋಟಿಗೂ ಮೇಲ್ಪಟ್ಟ ಮೂಲ ಧನ ವ್ಯಯಮಾಡುವುದಕ್ಕೆ ಮತ್ತು ರೂ.5.00 ಕೋಟಿಗೂ ಮೇಲ್ಪಟ್ಟು ನಡೆಸುವ ಕಾರ್ಯಕ್ರಮಕ್ಕೆ.

(ಖಿ) ಆರ್ಥಿಕ ಸಲಹೆಗಾರರನ್ನು ನೇಮಕಮಾಡಿಕೊಳ್ಳುವಾಗ.

ಈ ಮೇಲ್ಕಂಡ ವಿಷಯಗಳಲ್ಲಿ ನಿರ್ದೇಶಕರ ಯಾವುದೇ ಪ್ರಸ್ತಾಪ ಅಥವಾ ನಿರ್ಣಯವನ್ನು ತೆಗೆದುಕೊಳ್ಳುವ ಮುನ್ನ ಸರ್ಕಾರದ ಅನುಮೋದನೆಗಾಗಿ ಕಾಯ್ದಿರಿಸತಕ್ಕದ್ದೇ ಹೊರತು ಸದರಿ ಅನುಮೋದನೆದೊರೆಯುವವರೆಗೂ ನಿರ್ದೇಶಕರು ಯಾವುದೇ ಕ್ರಮವನ್ನು ಜರುಗಿಸುವಂತಿಲ್ಲ.

೮೭. ಈ ಜ್ಞಾಪನಾ ಪತ್ರದಲ್ಲಿ ಒಳಗೊಂಡಿರುವ ಯಾವುದೇ ಅಂತರ್‌ನಿಯಮಗಳಲ್ಲದೆ ರಾಜ್ಯಪಾಲರು ಕಂಪನಿಯ ಹಣಕಾಸಿಗೆ ಸಂಬಂಧಿಸಿದಂತೆ ಹಾಗೂ ಕಂಪನಿಯ ವ್ಯವಹಾರ ಹಾಗೂ ವಹಿವಾಟಿಗೆ ಸಂಬಂಧಿಸಿದಂತೆ ಅವರ

ವಿವೇಚನೆಯಲ್ಲಿ ಸೂಕ್ತವೆಂದು ತಿಳಿದ ನಿರ್ದೇಶನ ಅಥವ ಸೂಚನೆಗಳನ್ನು ಕಾಲಕಾಲಕ್ಕೆ ನೀಡಬಹುದು ಹಾಗೂ ನಿರ್ದೇಶಕರುಗಳು ಅಂತಹ ನಿರ್ದೇಶನಗಳನ್ನು ಅಥವ ಸೂಚನೆಗಳನ್ನು ಅನುಸರಿಸತಕ್ಕದ್ದು ಹಾಗೂ ಅನುಷ್ಠಾನಗೊಳಿಸತಕ್ಕದ್ದು.

## ಡಿವಿಡೆಂಡ್‌ಗಳು ಮತ್ತು ರಿಜರ್ವ್

88. ಕಂಪನಿಯು ಸರ್ವ ಸದಸ್ಯರ ಸಭೆಯಲ್ಲಿ ಡಿವಿಡೆಂಡ್‌ಗಳನ್ನು ಪ್ರಕಟಿಸಬಹುದು, ಆದರೆ, ಮಂಡಳಿ ಶಿಫಾರಸ್ಸು ಮಾಡಿದ ಮೊಬಲಗಿಗಿಂತಲೂ ಡಿವಿಡೆಂಡ್‌ನ ಮೊಬಲಗು ಹೆಚ್ಚಾಗಿರಬಾರದು.

89. ಕಲಂ 123ರ ನಿಬಂಧನೆಗಳಿಗನುಸಾರವಾಗಿ ಮಂಡಳಿಯು ಕಾಲ ಕಾಲಕ್ಕೆ ಮಧ್ಯಂತರ ಡಿವಿಡೆಂಡ್‌ಗಳನ್ನು ತನ್ನ ಸದಸ್ಯರಿಗೆ ಪಾವತಿ ಮಾಡುವುದು, ಇದು ಕಂಪನಿಯ ಲಾಭಕ್ಕೆ ಅನುಗುಣವಾಗಿ ನಿರ್ದೇಶಕರು ಹಂಚತಕ್ಕದ್ದು.

90. ಕಲಂ 123ರ ನಿಬಂಧನೆಗಳಿಗನುಸಾರವಾಗಿ ಡಿವಿಡೆಂಡ್‌ಗಳನ್ನು ಆಯಾ ವರ್ಷದಲ್ಲಿ ಗಳಿಸಿದ ಲಾಭಗಳಲ್ಲಿ ಅಥವಾ ಹಂಚದೇ ಇರುವ ಲಾಭಗಳಿಂದ ಮಾತ್ರ ಹಂಚತಕ್ಕದ್ದೇ ಹೊರತು ಬೇರೆ ವಿಧಾನದಲ್ಲಿ ಡಿವಿಡೆಂಡ್‌ಗಳನ್ನು ಪಾವತಿಸುವಂತಿಲ್ಲ. ಆದಾಗ್ಯೂ ಕಾಯಿದೆಯ ಎರಡನೇ ಕಲಂ 123(1) ನಿಬಂಧನೆಗಳು ಕಂಪನಿಗೆ ಅನ್ವಯವಾಗುವುದಿಲ್ಲ.

91(1). ವ್ಯಕ್ತಿಗಳಿಗೆ ಷೇರುಗಳ ಬಗ್ಗೆ ಯಾವುದೇ ಹಕ್ಕುಗಳಿದ್ದರೆ ಮತ್ತು ಡಿವಿಡೆಂಡ್‌ಗಳು, ಮತ್ತು ಘೋಷಿಸಿ ಪಾವತಿಸತಕ್ಕದ್ದು ಮತ್ತು ಅದರಂತೆ ಎಲ್ಲಾ ಷೇರುಗಳ ಹಣವನ್ನು ಪಾವತಿ ಮಾಡುವುದು ಅಥವಾ ಷೇರುಗಳಿಗೆ ಜಮೆ ಮಾಡುವುದು ಅದರಂತೆ ಡಿವಿಡೆಂಡ್‌ಗಳು ಪಾವತಿ ಮಾಡತಕ್ಕದ್ದು, ಆದರೆ ಇಲ್ಲಿಯವರೆಗೂ ಸುದೀರ್ಘ ಅವಧಿಗೆ ಬಾಕಿ ಇದ್ದು ಘೋಷಿಸದೇ, ಪಾವತಿಸದೇ ಇರುವ ಷೇರುಗಳಿಗೆ ಕಂಪನಿಯು ಡಿವಿಡೆಂಡ್‌ನ್ನು ಘೋಷಿಸಿಸುವುದು ಮತ್ತು ಷೇರುಗಳ ಹಣಕ್ಕೆ ಅನುಗುಣವಾಗಿ ಪಾವತಿ ಮಾಡತಕ್ಕದ್ದು.

(2) ಪಾವತಿ ಮಾಡದೇ ಇರುವ ಹಣ ಅಥವಾ ಷೇರುಗಳಿಗೆ ಕರೆ ಮಾಡಿದರೂ ಜಮೆ ಮಾಡದೇ ಇರುವವುಗಳಿಗೆ ಬಡ್ಡಿಯನ್ನು ನೀಡಿದಾಗ, ಅದನ್ನು ಈ ಜ್ಞಾಪನಾ ಪತ್ರದ ಪ್ರಕಾರ ಷೇರುಗಳಿಗೆ ಪಾವತಿ ಮಾಡಿದ್ದೆಂದು ತಿಳಿಯತಕ್ಕದ್ದು.

(3) ಕಂಪನಿಗೆ ಕಾಯಿದೆಯ ಕಲಂ 123(4) ನಿಬಂಧನೆಗಳು ಅನ್ವಯವಾಗುವುದಿಲ್ಲ.

92. ಮಂಡಳಿಯು ಡಿವಿಡೆಂಡ್‌ಗಳನ್ನು ಘೋಷಿಸುವ ಮುನ್ನ ಕೆಲವು ಹಣವನ್ನು ಮೀಸಲು ಅಥವಾ ಮೀಸಲುಗಳಾಗಿ ಕಂಪನಿಯ ಲಾಭಗಳಲ್ಲಿ ತೆಗೆದಿಡುವುದು, ಇದು ನಿರ್ದೇಶಕರ ವಿವೇಚನೆಗೆ ಬಿಟ್ಟಂತೆ ತೆಗೆದಿಡುವುದು, ಇದನ್ನು ಅನಿಯಶ್ಚಯತೆಗಳಿಗಾಗಿ ಅಥವಾ ಡಿವಿಡೆಂಡ್‌ಗಳನ್ನು ಸಮಾನ ಮಾಡುವ ಸಲುವಾಗಿ ಅಥವಾ ಇತರೇ ಉದ್ದೇಶಗಳಿಗಾಗಿ ಕಂಪನಿಯ ಲಾಭವನ್ನು ಸೂಕ್ತ ವಾಗಿ ಉಪಯೋಗಿಸತಕ್ಕದ್ದು. ಮತ್ತು ಬಾಕಿ ಇರುವ ಹಣವನ್ನು ಅವರ ತೀರ್ಮಾನದಂತೆ ಕಂಪನಿಯ ವ್ಯವಹಾರಕ್ಕೆ ಉಪಯೋಗಿಸುವುದು ಅಥವಾ ಇತರೇ ಹೂಡಿಕೆಗಳಲ್ಲಿ ಹೂಡಿಕೆ ಮಾಡುವುದು (ಕಂಪನಿಯ ಷೇರುಗಳನ್ನು ಹೊರತುಪಡಿಸಿ) ಇದನ್ನು ನಿರ್ದೇಶಕರ ವಿವೇಚನೆಯಂತೆ ನಿರ್ವಹಿಸತಕ್ಕದ್ದು.

93. ಷೇರಿನ ಬಗ್ಗೆ ಯಾವುದೇ ಡಿವಿಡೆಂಡ್‌ಗಳಿಗೆ, ಬೋನಸ್ ಅಥವಾ ಇತರೇ ಹಣವನ್ನು ಪಾವತಿಸಬೇಕಾಗಿದ್ದರೆ ಯಾವುದೇ ಇಬ್ಬರು ಅಥವಾ ಅದಕ್ಕಿಂತಲೂ ಹೆಚ್ಚು ಜಂಟಿ ಷೇರುದಾರರಿಗೆ ಪಾವತಿ ಮಾಡತಕ್ಕದ್ದು.

94. ಕಾಯಿದೆಯ ಪ್ರಕಾರ ಯಾವುದೇ ಡಿವಿಡೆಂಡ್‌ನ ಬಗ್ಗೆ ಸೂಚನಾ ಪತ್ರವನ್ನು ಪ್ರಕಟಿಸಿದಲ್ಲಿ ಈ ಕೆಳಕಂಡಂತೆ ಅರ್ಹ ವ್ಯಕ್ತಿಗಳಿಗೆ ಹಂಚತಕ್ಕದ್ದು.

95. ಕಂಪನಿಯಿಂದ ಡಿವಿಡೆಂಡ್‌ಗೆ ಯಾವುದೇ ಬಡ್ಡಿ ಇರುವುದಿಲ್ಲ.

## ಲೆಕ್ಕಪತ್ರಗಳು

96. ಆಡಳಿತ ಮಂಡಳಿಯು ಸೂಕ್ತ ಲೆಕ್ಕಪತ್ರಗಳನ್ನು ಈ ಕೆಳಕಂಡವುಗಳ ಬಗ್ಗೆ ನಿರ್ವಹಿಸತಕ್ಕದ್ದು :

(ಎ) ಕಂಪನಿಯು ಸ್ವೀಕರಿಸಿದ ಎಲ್ಲಾ ವಿಧವಾದ ಹಣಗಳು ಮತ್ತು ಅದರ ವಿಸ್ತರಣೆ ಮತ್ತು ಎಲ್ಲಾ ವಿಧವಾದ ಸ್ವೀಕೃತಿಗಳು ಮತ್ತು ಪಾವತಿಗಳ ಬಗ್ಗೆ ನಿರ್ವಹಿಸತಕ್ಕದ್ದು.

(ಬಿ) ಕಂಪನಿಯು ಮಾರಾಟ ಮಾಡುವ ಮತ್ತು ಖರೀದಿಸುವ ಎಲ್ಲಾ ವಸ್ತುಗಳ ಬಗ್ಗೆ;

(ಐ) ಕಂಪನಿಯ ಆಸ್ತಿಗಳು ಮತ್ತು ಜವಾಬ್ಧಾರಿಗಳ ಬಗ್ಗೆ.

97. ಕಂಪನಿಯ ಲೆಕ್ಕ ಪುಸ್ತಕಗಳನ್ನು / ಎಲ್ಲಾ ದಾಖಲೆಗಳನ್ನು ಕಂಪನಿಯ ನೋಂದಣಿ ಕಛೇರಿಯಲ್ಲಿಡತಕ್ಕದ್ದು ಅಥವಾ ಆಡಳಿತ ಮಂಡಳ ನಿಗಧಿಪಡಿಸಿದ ಭಾರತ ದೇಶದಲ್ಲಿನ ಇತರೇ ಸ್ಥಳಗಳು ಮತ್ತು ಇವುಗಳನ್ನು ನಿರ್ದೇಶಕರು ಪರಿಶೀಲಿಸಲು ಕಛೇರಿಯ ವ್ಯವಹಾರದ ವೇಳೆಯಲ್ಲಿ ತೆರೆದಿಟ್ಟಿರತಕ್ಕದ್ದು. ಕಾಯಿದೆಯ ನಿಬಂಧನೆಗಳನ್ವಯ ಸದರಿ ಲೆಕ್ಕ ಪುಸ್ತಕಗಳನ್ನು ವಿದ್ಯುನ್ಮಾನ ಪದ್ಧತಿಯಲ್ಲಿ ನಿರ್ವಹಿಸತಕ್ಕದ್ದು.

98. ಕಂಪನಿಯ ಲೆಕ್ಕ ಪುಸ್ತಕಗಳನ್ನು ನಿರ್ದೇಶಕರಲ್ಲದ ಸದಸ್ಯರು ಪರಿಶೀಲಿಸಲು ಮತ್ತು ಯಾವುದೇ ಸದಸ್ಯನು (ನಿರ್ದೇಶಕರಲ್ಲ) ಕಂಪನಿಯ ಲೆಕ್ಕ ಪತ್ರಗಳನ್ನು ಅಥವಾ ಪುಸ್ತಕಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಲು ಯಾವಾಗ, ಎಲ್ಲಿಯ ವರೆಗೆ ಯಾವ ಸಮಯದಲ್ಲಿ ಮತ್ತು ಯಾವ ಸ್ಥಳದಲ್ಲಿ ಮತ್ತು ಯಾವ ಸ್ಥಿತಿ ಅಥವಾ ನಿಬಂಧನೆಗಳ ಪ್ರಕಾರ ಪರಿಶೀಲಿಸಬಹುದು ಎಂಬುದನ್ನು ಆಡಳಿತ ಮಂಡಳಿಯು ಕಾಲ ಕಾಲಕ್ಕೆ ತೀರ್ಮಾನಿಸುತ್ತದೆ. ಆದರೆ ಇದಕ್ಕೆ ಕಾನೂನಿನ ಅಡಿಯಲ್ಲಿ ಅನುಮತಿಯಿರಬೇಕು ಅಥವಾ ಸರ್ವ ಸದಸ್ಯರ ಸಭೆಯಲ್ಲಿ ಕಂಪನಿಯ ನಿರ್ದೇಶಕರಿಂದ ಅಧಿಕೃತ ಅನುಮತಿಯನ್ನು ಪಡೆದಿರಬೇಕು.

99. ಆಡಳಿತ ಮಂಡಳಿಯು ಕಾಯಿದೆಯ ಪ್ರಕಾರ ಕಂಪನಿಯ ಸರ್ವ ಸದಸ್ಯರ ಸಭೆಯಲ್ಲಿ ಲಾಭ ನಷ್ಟಗಳ ತಃಖ್ತೆ; ಆದಾಯ ಮತ್ತು ಖರ್ಚುಗಳ ತಃಖ್ತೆ, ಆಯ ವ್ಯಯ ತಃಖ್ತೆ ಮತ್ತು ಕಾಯಿದೆಯಲ್ಲಿ ಕಂಡಂತೆ ವರದಿಗಳನ್ನು ಸಿದ್ಧಪಡಿಸತಕ್ಕದ್ದು.

100. ಕಾಯಿದೆಯಲ್ಲಿ ಉಲ್ಲೇಖಿಸಿದಂತೆ ಅಲ್ಲದೇ ಲಾಭ ನಷ್ಟಗಳ ತಃಖ್ತೆಯನ್ನು ತೋರಿಸತಕ್ಕದ್ದು, ಸೂಕ್ತ ಅನೇಕ ಶಿರೋನಾಮೆಗಳಡಿಯಲ್ಲಿ ಕಂಡಂತೆ, ಒಟ್ಟು ಲಾಭ, ಅದು ಯಾವ ಯಾವ ವಿಧಗಳಲ್ಲಿ ಬಂದಿದೆ ಎಂಬುದನ್ನು; ಮತ್ತು ಒಟ್ಟು ಖರ್ಚುಗಳು ಯಾವ ಯಾವ ವಿಧದಲ್ಲಿ ಉಂಟಾಗುತ್ತಿವೆ ಎಂಬುದನ್ನು ಬೇರ್ಪಡಿಸತಕ್ಕದ್ದು ಮತ್ತು ಸದರಿ ಖರ್ಚುಗಳಲ್ಲಿ ಸ್ಥಾಪನಾ ಖರ್ಚುವೆಚ್ಚಗಳು, ಸಂಬಳ, ಇತ್ಯಾದಿ ಖರ್ಚುಗಳನ್ನು ಬೇರೆಯಾಗಿಯೇ ತೋರಿಸತಕ್ಕದ್ದು. ಪ್ರತಿಯೊಂದು ವೆಚ್ಚವನ್ನು ಆಯಾ ವರ್ಷದ ಆದಾಯದಲ್ಲಿ ಲೆಕ್ಕಕ್ಕೆ ಪರಿಗಣಿಸತಕ್ಕದ್ದು, ಆದ್ದರಿಂದ ಉಳಿಕೆ ಲಾಭ ಮತ್ತು ನಷ್ಟವನ್ನು ಸಭೆಯ ಮುಂದೆ ಸಲ್ಲಿಸತಕ್ಕದು ಮತ್ತು ಯಾವುದೇ ಒಂದು ಸಾಲಿನಲ್ಲಿ ಉಂಟಾದ ಖರ್ಚಿನ ಬಾಬ್ತು ಹೆಚ್ಚಾಗಿದ್ದರೆ ಅದನ್ನು ಅನೇಕ ವರ್ಷಗಳಿಗೆ ಹಂಚತಕ್ಕದ್ದು. ಮತ್ತು ಪೂರ್ತಿಹಣವನ್ನು ತೋರಿಸತಕ್ಕದ್ದು ಮತ್ತು ಸದರಿ ಖರ್ಚನ್ನು ಅದೇ ವರ್ಷದಲ್ಲಿ ತೀರುವಳಿಯಾಗದೇ ಅನೇಕ ವರ್ಷಗಳಿಗೆ ಹಂಚಿಕೆಯಾಕೆ ಆಗಿದೆ ಎಂಬುದನ್ನು ಸ್ಪಷ್ಟವಾಗಿ ತೋರತಕ್ಕದ್ದು.

101. ಪ್ರತಿ ವರ್ಷವು ಆಯ ವ್ಯಯ ಪಟ್ಟಿ, ಲಾಭ ನಷ್ಟ ತಃಖ್ತೆ ಸಿದ್ಧಪಡಿಸಿ ಅವುಗಳನ್ನು ಕಂಪನಿಯ ಸರ್ವ ಸದಸ್ಯರ ಸಭೆಯಲ್ಲಿ ಹಾಜರ್ಪಡಿಸತಕ್ಕದ್ದು ಅದು ಪ್ರಾರಂಭದ ದಿನದಿಂದ ಅದನ್ನು ಕಳೆದ ಬಾರಿ ಎಲ್ಲಿಯ ವರೆಗೂ ಸಲ್ಲಿಸಿರುತ್ತೋವೇ ಅಲ್ಲಿಯ ವರೆಗೂ ಮತ್ತು ಕೊನೆ ಮಾಡಿದ ದಿನವನ್ನು ಆರು ತಿಂಗಳ ಅವಧಿಯನ್ನು ಮೀರಬಾರದು ಅಥವಾ ಅವಧಿಯನ್ನು ವಿಸ್ತರಿಸಲು ಅನುಮತಿ ನೀಡಿದ್ದರೆ ಆಗ ವಿಸ್ತರಿಸಿದ ಆರು ತಿಂಗಳು ಮುಗಿದ ನಂತರ ಸಲ್ಲಿಸತಕ್ಕದ್ದು. ಆಯವ್ಯಯ ತಃಖ್ತೆಯೊಂದಿ ಕಂಪನಿಯ ನಿರ್ದೇಶಕರ ವರದಿಯನ್ನು ಲಗತ್ತಿಸತಕ್ಕದ್ದು, ಅದು ಕಂಪನಿಯ ಕಾರ್ಯ ಚಟುವಟಿಕೆಗಳ ಬಗ್ಗೆ ಮತ್ತು ಡಿವಿಡಂಡ್ ರೂಪದಲ್ಲಿ ಎಷ್ಟು ಹಣ ಪಾವತಿ ಮಾಡಬೇಕೆಂಬುದನ್ನು ಮತ್ತು ಮೀಸಲು ನಿಧಿಗೆ (ಅಕಸ್ಮಾತ್ ಇದ್ದರೆ) ಎಷ್ಟು ತೆಗೆದಿಡಬೇಕೆಂಬುದನ್ನು ಅದರಲ್ಲಿ ತೋರತಕ್ಕದ್ದು

## ಸೂಚನಾ ಪತ್ರಗಳು

102. (1) ಕಂಪನಿಯು ತನ್ನ ಸದಸ್ಯರಿಗೆ ಯಾವುದೇ ಸೂಚನಾ ಪತ್ರವನ್ನು ವೈಯಕ್ತಿಕವಾಗಿ ಅಥವಾ ಅಂಚೆ ಮುಖಾಂತರ ನೀಡತಕ್ಕದ್ದು ಆತನು ನೀಡಿದ ನೋಂದಾಯಿತ ವಿಳಾಸಕ್ಕೆ (ಆತನು ನೋಂದಣಿ ವಿಳಾಸವನ್ನು ಭಾರತ ದೇಶದಲ್ಲಿ

ಹೊಂದಿಲ್ಲದೇ ಇದ್ದಲ್ಲಿ), ಆತನು ಭಾರತ ದೇಶದಲ್ಲಿ ಕಂಪನಿಗೆ ನೀಡಿದ ವಿಳಾಸಕ್ಕೆ ಸೂಚನಾ ಪತ್ರವನ್ನು ಕಳುಹಿಸತಕ್ಕದ್ದು. ಇದು ಕಾನೂನಿ ನಿಬಂಧನೆಗಳ ಪ್ರಕಾರ ನಿರ್ವಹಿಸತಕ್ಕದ್ದು.

(2) ಅದಾಗಿ ಸೂಚನಾ ಪತ್ರವನ್ನು ಅಂಚೆ ಮೂಲಕ ಕಳುಹಿಸಿದ್ದರೆ, ಅದು ಸದರಿ ಸದಸ್ಯನಿಗೆ ಸೇರಿದೆ ಎಂಬುದಾಗಿರುತ್ತದೆ. ಆದರೆ ವಿಳಾಸವನ್ನು ಸರಿಯಾಗಿ ನಮೂದಿಸತಕ್ಕದ್ದು ಮತ್ತು ಸದರಿ ಸೂಚನಾ ಪತ್ರವನ್ನು ಒಳಗೊಂಡ ಪತ್ರವು ಮತ್ತು ಅದು ಸಾಧಾರಣ ಅಂಚೆಯಲ್ಲಿ ಕಳುಹಿಸಿದಾಗ ಅದು ಸದರಿ ಸದಸ್ಯನಿಗೆ ಬಟವಾಡೆ ಆದೆಂತೆ.

103. ಸದಸ್ಯನು ಭಾರತ ದೇಶದಲ್ಲಿ ನೋಂದಣಿ ವಿಳಾಸವಿಲ್ಲದೇ ಇದ್ದ ಪಕ್ಷದಲ್ಲಿ ಮತ್ತು ಆತನು ಭಾರತ ದೇಶದಲ್ಲಿನ ನೋಂದಣಿ ವಿಳಾಸವನ್ನು ಸೂಚನಾ ಪತ್ರಗಳನ್ನು ನೀಡಲು ನೀಡದೇ ಇದ್ದ ಪಕ್ಷದಲ್ಲಿ ಆತನಿಗೆ ಸೂಚನಾ ಪತ್ರವನ್ನು ನೀಡಲು ನೋಂದಣಿ ಕಛೇರಿಯಿರುವ ಹತ್ತಿರದಲ್ಲೇ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಣೆ ನೀಡುವುದು. ಅದು ಸದರಿ ಸದಸ್ಯನಿಗೆ ಸೂಚನಾ ಪತ್ರವನ್ನು ಪ್ರಕಟಣೆ ನೀಡಿದ ದಿನದಂದೇ ನೀಡಿದಂತಾಗುವುದು.

104. ಜಂಟಿ ಷೇರುದಾರರಿಗೆ ನೋಂದಣಿಯಾದ ಮೊದಲನೇ ಹೆಸರಿಗೆ ಸೂಚನಾ ಪತ್ರವನ್ನು ಕಳುಹಿಸಿದಲ್ಲಿ ಅದು ಎಲ್ಲಾ ಜಂಟಿ ಸದಸ್ಯರಿಗೆ ತಲುಪಿದಂತಾಗುವುದು.

105. ಕಂಪನಿಯು ಸೂಚನಾ ಪತ್ರವನ್ನು ಯಾವುದೇ ಸದಸ್ಯನು ಮರಣ ಹೊಂದಿದರೆ ಅಥವಾ ದಿವಾಳಯಾದಾಗ ಆತನ ಪರವಾಗಿ ಅರ್ಹ ವ್ಯಕ್ತಿಗಳಗೆ ಕಳುಹಿಸತಕ್ಕದ್ದು ಅದನ್ನು ಅಂಚೆ ಮೂಲಕ ಪೂರ್ವಪಾವತಿಸಿದ ಪತ್ರದ ಮೂಲಕ ಅವರ ವಿಳಾಸಕ್ಕೆ ಕಳುಹಿಸತಕ್ಕದ್ದು, ಅವರ ಹೆಸರು, ಮರಣ ಹೊಂದಿದವರೊಂದಿಗಿನ ಸಂಬಂಧ ಅಥವಾ ದಿವಾಳಯಾದವರ ನಿಯೋಜಿತರಿಗೆ ಆ ವಿಧವಾಗಿ ಅಥವಾ ಬೇರೆ ವಿವರಣೆಯೊಂದಿಗೆ ಕಳುಹಿಸತಕ್ಕದ್ದು ಭಾರತ ದೇಶದಲ್ಲಿನ ಸದರಿ ವಿಳಾಸಕ್ಕೆ (ಯಾವುದಾದರೂ ಇದ್ದಲ್ಲಿ) ಅದಕ್ಕೆ ನೀಡಿದ್ದರೆ ಸದರಿ ವಿಳಾಸಕ್ಕೆ ಅವರ ಮೂಲಕ ಕ್ಲೇಮು ಮಾಡುವವರಿಗೆ ರವಾನಿಸತಕ್ಕದ್ದು. ಅಥವಾ (ಅಂತಹ ವಿಳಾಸವು ನೀಡುವ ತನಕ) ಸೂಚನಾ ಪತ್ರವನ್ನು ಯಾವುದೇ ವಿಧಾನದಲ್ಲಿ ಮರಣ ಹೊಂದಿದ ಅಥವಾ ದಿವಾಳಯು ಉಂಟಾಗದಿದ್ದಲ್ಲಿ ಅದಕ್ಕೆ ರವಾನಿಸತಕ್ಕದ್ದು.

106. ಸರ್ವ ಸದಸ್ಯರ ಸಭೆಯ ಸೂಚನಾ ಪತ್ರವನ್ನು ಈ ಕೆಳಕಂಡಂತೆ ಅಧಿಕೃತವಾಗಿ (ಎ) ಕಂಪನಿಯ ಪ್ರತಿಯೊಬ್ಬ ಸದಸ್ಯರಿಗೂ (ಷೇರು ವಾರೆಂಟ್‌ಗಳನ್ನು ಹೊಂದಿದವರನ್ನು ಒಳಗೊಂಡಂತೆ) ನೀಡತಕ್ಕದ್ದು, ಆದರೆ ಯಾರು ವಿಳಾಸವನ್ನು ಭಾರತ ದೇಶದಲ್ಲಿ ನೋಂದಾಯಿಸಿರುವುದಿಲ್ಲವೋ ಅವರಿಗೆ ನೀಡುವಂತಿಲ್ಲ ಮತ್ತು ಯಾರು ಕಂಪನಿಗೆ ಭಾರತ ದೇಶದಲ್ಲಿನ ವಿಳಾಸವನ್ನು ಸೂಚನಾ ಪತ್ರವನ್ನು ನೀಡಲು ನೀಡಿರುವುದಿಲ್ಲವೋ ಅಂತಹವರಿಗೆ, ಮತ್ತು (ಬಿ) ಪ್ರತಿಯೊಬ್ಬ ಷೇರುದಾರರು ಮರಣ ಹೊಂದಿದರೆ ಅಥವಾ ದಿವಾಳಯಾದರೆ, ಸದರಿ ಮರಣ ಹೊಂದಿದ ಅತವಾ ದಿವಾಳಯಾದ ವ್ಯಕ್ತಿಯ ಪರವಾಗಿ ಅರ್ಹ ವ್ಯಕ್ತಿಯು ಸೂಚನಾ ಪತ್ರಕ್ಕೆ ಅರ್ಹನಾಗಿರುತ್ತಾನೆ.

### ನಷ್ಟಭರ್ತಿ

107. ಕಾಯಿದೆಯ ನಿಬಂಧನೆಗಳ ಪ್ರಕಾರ, ಕಂಪನಿಯ ಪ್ರತಿಯೊಬ್ಬ ನಿರ್ದೇಶಕರು, ವ್ಯವಸ್ಥಾಕರು ಮತ್ತು ಇತರೇ ಅಧಿಕಾರಿಗಳು ಅಥವಾ ಸೇವಕರು ಕಂಪನಿಯಿಂದ ನಷ್ಟಭರ್ತಿಯನ್ನು ಪಡೆಯತಕ್ಕವರಾಗಿರುತ್ತಾರೆ. ಅದಾಗಿ ಪಾವತಿಸಬೇಕಾದ ಎಲ್ಲಾ ಖರ್ಚುವೆಚ್ಚಗಳು, ನಷ್ಟಗಳು, ಲುಕ್ಸಾನುಗಳು ಮತ್ತು ವೆಚ್ಚಗಳನ್ನು ಕಂಪನಿಯ ಪರವಾಗಿ ಪಾವತಿಸಬೇಕಾಗಿರುತ್ತದೆ. ಈ ಖರ್ಚುವೆಚ್ಚಗಳನ್ನು ಕಂಪನಿಯ ಯಾವುದೇ ಸಿಬ್ಬಂದಿ ಅಥವಾ ಸೇವಕರಿಗೆ ಮರುಪಾವತಿ ಮಾಡತಕ್ಕದ್ದು, ಅದಾಗಿ ಸದರಿ ಖರ್ಚುವೆಚ್ಚಗಳು ಯಾವುದೇ ಗುತ್ತಿಗೆಯನ್ನು ಮಾಡಿಕೊಂಡಾಗ ಅಥವಾ ಯಾವುದೇ ಕಾರ್ಯ ಚಟುವಟಿಕೆಗಳನ್ನು ಕಂಪನಿಯ ಪರವಾಗಿ ಆತನು ನಿರ್ದೇಶಕನಾಗಿ, ವ್ಯವಸ್ಥಾಪಕರಾಗಿ ಅಥವಾ ಇತರೇ ಅಧಿಕಾರಿಯಾಗಿ ಅಥವಾ ಸೇವಕನಾಗಿ ಅಥವಾ ಇನ್ಯಾವುದೇ ವಿಧಾನದಲ್ಲಿ ನಡೆಸಿ ಆತನ ಕಂಪನಿಯ ಪರವಾಗಿ ತನ್ನ ಕೆಲಸವನ್ನು ನಿರ್ವಹಿಸಿದಾಗ ಮತ್ತು ಈ ಖರ್ಚುವೆಚ್ಚಗಳು ಆತನ ಪ್ರಯಾಣ ಭತ್ಯವನ್ನು ಸಹಾ ಒಳಗೊಂಡಿರುತ್ತವೆ ಮತ್ತು ಸದರಿ ಖಚಿತವಾಗಿ ಮತ್ತು ಆತನ ಖರ್ಚುವೆಚ್ಚಗಳು ಮೇಲ್ಕಂಡಂತೆ ಅಲ್ಲದೆ ಎಲ್ಲಾ ಜವಾಬ್ದಾರಿಗಳಗೆ ಆತನು ನಿರ್ದೇಶಕನಾಗಿ, ವ್ಯವಸ್ಥಾಪಕನಾಗಿ ಅಥವಾ ಇತರೇ ಅಧಿಕಾರಿಯಾಗಿ ಅಥವಾ ಸೇವಕನಾಗಿ ಯಾವುದೇ ವಿಷಯದ ಬಗ್ಗೆ ರಕ್ಷಣಾತ್ಮಕ ಕ್ರಮಗಳನ್ನು ಕೈಗೊಂಡಾಗ, ಅಂದರೆ ಅವು ನಾಗರೀಕ ಮತ್ತು

ಅಪರಾಧ ಸ್ವರೂಪವಾಗಿದ್ದರೆ, ಸದರಿ ವಿಷಯದಲ್ಲಿ ತೀಪು ಆತನ ಪರವಾಗಿ ನೀಡಿದಾಗ ಅಥವಾ ಆತನು ಸದರಿ ವಿಷಯದಲ್ಲಿ ಬಿಡುಗಡೆಗೊಂಡರೆ ಅಥವಾ ಕಾಯಿದೆ ಅಡಿಯಲ್ಲಿ ಯಾವುದೇ ಅರ್ಜಿ ಸಂಬಂಧವಾಗಿ ನ್ಯಾಯಾಲಯವು ಪರಿಹಾರವನ್ನು ಮಂಜೂರು ಮಾಡಿದಾಗ.

108. ಕಾಯಿದೆ ನಿಬಂಧನೆಗಳ ಪ್ರಕಾರ, ಕಂಪನಿಯ ಯವುದೇ ನಿರ್ದೇಶಕರು, ವ್ಯವಸ್ಥಾಪಕರು ಅಥವಾ ಇತರೇ ಅಧಿಕಾರಿಗಳು ಯಾವುದೇ ವಿಧವಾದ ಕಾರ್ಯಚಟುವಟಿಕೆಗಳು, ಉದಾಸೀನತೆ ಅಥವಾ ಇತರೇ ನಿರ್ದೇಶಕರ ಅಥವಾ ಅಧಿಕಾರಿಗಳ ಅಥವಾ ಸ್ವೀಕೃತಿಗಳಲ್ಲಿ ಯಾರೊಂದಿಗೆ ಯಾವುದೇ ತಪ್ಪುಗಳಗೆ ಮತ್ತು ಯಾವುದೇ ಕ್ರಿಯೆಗಳಗೆ ಮತ್ತು ಅದರಿಂದ ಯವುದೇ ನಷ್ಟ ಅಥವಾ ಖರ್ಚುಗಳು ಕಂಪನಿಗೆ ಉಂಟಾದಲ್ಲಿ, ಅಂದರೆ ಯಾವುದೇ ಸ್ವತ್ತಿಗೆ ಅಸಂಪೂರ್ಣ ಶಿರೋನಾಮೆ ಇರುವ ಸ್ವತ್ತುಗಳನ್ನು ನಿರ್ದೇಶಕರ ಆದೇಶದ ಮೇರೆಗೆ ಅಥವಾ ಕಂಪನಿಯ ಪರವಾಗಿ ಪಡೆದಿದ್ದರೆ, ಅಥವಾ ಅಸಂಪೂರ್ಣ ಅಥವಾ ಭದ್ರತೆಯಲ್ಲಿ ಯಾವುದೇ ಕೊರತೆ ಉಂಟಾದಲ್ಲಿ ಮತ್ತು ಯಾವುದರಲ್ಲಿ ಕಂಪನಿಯು ತನ್ನ ಹಣವನ್ನು ಹೂಡಿರುತ್ತದೋ ಅದಕ್ಕೆ ಅಥವಾ ದಿವಾಳ ಯಾವುದೇ ಲುಕ್ಸಾನು ಅಥವಾ ನಷ್ಟ ಉಂಟಾದಲ್ಲಿ ಮತ್ತು ಯಾವುದೇ ತಿರುಚಿದ ವಿಷಯದ ಬಗ್ಗೆ ಯಾವುದೇ ವ್ಯಕ್ತಿಯ ಬಳ ಯಾವುದೇ ವಿಧವಾದ ಹಣ, ಭದ್ರತೆಗಳು ಅಥವಾ ಅವುಗಳ ಫಲಗಳನ್ನು ಠೇವಣಿ ಮಾಡುವುದು ಅಥವಾ ಯಾವುದೇ ಲುಕ್ಸಾನು ತೀರ್ಮಾನದ ಕೈ ತಪ್ಪಿನಿಂದ ಅಥವಾ ಮೇಲ್ವಿಚಾರಣೆ ಉಂಟಾದರಲ್ಲಿ, ಇವೆಲ್ಲವೂ ಆತನ ದುರದೃಷ್ಟದಿಂದ ಅಥವಾ ಆತನ ಕಾರ್ಯ ನಿರ್ವಹಿಸುವಾಗ ಕೈತಪ್ಪಿನಿಂದ ಅಥವಾ ಬೇಜವಾಬ್ದಾರಿತನದಿಂದ ಅಥವಾ ಕಾರ್ಯನಿರ್ವಹಣೆಯಲ್ಲಿ ಉಲ್ಲಂಘನೆ ಯಾದಲ್ಲಿ ಅಥವಾ ನಂಬಿಕೆಯ ಉಲ್ಲಂಘನೆಯಾದಲ್ಲಿ ಇದಕ್ಕೆಲ್ಲಾ ಅವರೇ ಜವಾಬ್ದಾರರಾಗಿರುತ್ತಾರೆ.

| ಹೆಸರುಗಳು, ವಿಳಾಸಗಳು ಮತ್ತು ಚಂದಾದಾರರ ವಿವರಗಳು | ಪ್ರತಿಯೊಬ್ಬ ಷೇರುದಾರರು ಹೊಂದಿರುವ ಷೇರುಗಳ ಸಂಖ್ಯೆ | ಸಹಿ |
|---|---|---|
| 1. ಶ್ರೀ ಜಿ. ಮತಿಯಾಸ್, ಐ.ಎ. & ಎ.ಎಸ್., ಮೈಸೂರು ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಮೈಸೂರು ರಾಜ್ಯದ ರಾಜ್ಯಪಾಲರ ಪರವಾಗಿ | 9,998 | ಮೈಸೂರು ರಾಜ್ಯದ ರಾಜ್ಯಪಾಲರ ಪರವಾಗಿ ಜಿ. ಮತಿಯಾಸ್ (ಸಹಿ), ಕಾರ್ಯದರ್ಶಿ, ಆರ್ಥಿಕ ಇಲಾಖೆ |
| 2. ಶ್ರೀ ಜಿ. ಮತಿಯಾಸ್, ಐ.ಎ. & ಎ.ಎಸ್., ಮೈಸೂರು ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಮೈಸೂರು ರಾಜ್ಯ | 1 | ಮೈಸೂರು ರಾಜ್ಯದ ರಾಜ್ಯಪಾಲರ ಪರವಾಗಿ ಜಿ. ಮತಿಯಾಸ್ (ಸಹಿ), ಕಾರ್ಯದರ್ಶಿ, ಆರ್ಥಿಕ ಇಲಾಖೆ |
| 3. ಶ್ರೀ ಬಿ.ಎಂ. ಅಬುಬಾಕರ್, ಐ.ಎ.ಎಸ್., ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆಗಳು, ಮೈಸೂರು ರಾಜ್ಯ | 1 | ಶ್ರೀ ಬಿ.ಎಂ. ಅಬುಬಾಕರ್, (ಸಹಿ) 26ನೇ ಏಪ್ರಿಲ್ 1960 ಸರ್ಕಾರದ ಕಾರ್ಯದರ್ಶಿ ವಾಣಿಜ್ಯ ಮತ್ತು ಕೈಗಾರಿಕೆಗಳು, |